ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೭ರಿಂದ ೧೨ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ;—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: '' ಮೊದಲನೆಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತವೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ ದೀರ್ಘ ಶೀಷಿಟಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೋ॥ ಎ. ಲಕ್ಷ್ಮಿಸಾಗರ್.—೧೯೮೭ನೇ ಕರ್ನಾಟಕ ಅಬಕಾರಿ(ಎರಡನೇ ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ''೧೯೮೭ನೇ ಕರ್ನಾಟಕ ಅಬಕಾರಿ(ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

## ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ನಿಯಂತ್ರಣ) ತಿದ್ದುಪಡಿ) ವಿಧೇಯಕ ೧೯೮೭.

ಶ್ರೀ ಕೆ. ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೆ, '೧೯೮೭ನೇ ಸಾಲಿನ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ) ಕ್ಕೆ ಸಂಬಂಧಿಸಿದ ವಿಧೇಯಕವನ್ನು ಸಭೆಯು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೇ, ಈ ತಿದ್ದುಪಡಿ ತಂದಿರತಕ್ಕ ಉದ್ದೇಶ ನಮ್ಮ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ, ಅವರಿಗೆ ತೊಂದರೆಯಲ್ಲಿ ಬೆಲೆಯಲ್ಲಿ ವ್ಯಾಪಾರಸ್ಥರು ಮೋಸ ಮಾಡುತ್ತಿದ್ದಾ ಮತ್ತೊಂದು ಅಭಿಪ್ರಾಯ ಏನೆಂದರೆ ಹಳ್ಳಿಗಳಲ್ಲಿ,ವ್ಯಾಪಾರ ಮಾಡುವವರು ಹೋಗಿ ಯಾವುದೇ ಸರಕು ಬತ್ತ,ರಾಗಿ,ಆಲುಗಡ್ಡೆ,ಶೇಂಗಾ ಇವುಗಳನ್ನು ಕಡಿಮೆ ಬೆಲೆಗೆ ಕೊಂಡು ಕೊಳ್ಳುವುದರ ಜೊತೆಗೆ ಮಾರು ಕಟ್ಟೆಗೆ ಭಾರತಕ್ಕೆ ಉತ್ಪಾದನೆ ಸೆಸ್ ಅನ್ನು ತಪ್ಪಿಸುತ್ತಿದ್ದಾರೆ. ಅದರ ಮೂಲಕ ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಸರ್ಕಾರಕ್ಕೆ ಬರತಕ್ಕ ನೂರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇದನ್ನು ತಿಳಿದು ರೈತರು ಯಾವುದೇ ಸರಕನ್ನು ಮಾರುಕಟ್ಟೆಗೆ ತಂದು ವ್ಯಾಪಾರ ಮಾಡಬೇಕು. ಕೊಂಡು ಕೊಳ್ಳುವವರು ಸಹ ಮಾರುಕಟ್ಟೆಯಲ್ಲಿ ಬಂದು ಕೊಂಡು ಕೊಳ್ಳಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದು ರೈತರ ಪರವಾಗಿರತಕ್ಕ ವಿಧೇಯಕ. ಮಾನ್ಯ ಸದಸ್ಯರುಗಳೆಲ್ಲ ಇದನ್ನು ಒಪ್ಪಿ ಕೊಂಡು ಪಾಸ್ ಮಾಡಿಕೊಡ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಮಾರ್ಕೆಟ್ ಏರಿಯಾ ಏನಿದೆ ಅದರಲ್ಲಿ ಕೊಳ್ಳತಕ್ಕದ್ದು ಮಾರತಕ್ಕದ್ದು, ಅಗ್ರಿಕಲ್ಚರಲ್ ಸೊಸೈಟಿ, ರಿಟೈಲ್ ಮಾರತಕ್ಕವರಿಗೆ ನಿರ್ಬಂಧವಿಲ್ಲ. ಯಾರು ಹಳ್ಳಿಗಳಲ್ಲಿ ಹೋಗಿ ವ್ಯಾಪಾರ ಮಾಡುತ್ತಾರೆ, ಅಲ್ಲಿಂದ ಬೇರೆ ಕಡೆ ಸರಕು ಸಾಗಿಸುತ್ತಾರೆ, ಅದರಿಂದ ಮಾರ್ಕೆಟ್‌ಗೆ ಬರತಕ್ಕ ಸೆಸ್, ಸೇಲ್ಸ್‌ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ತಪ್ಪಿಸುತ್ತಿದ್ದಾರೆ ಅದನ್ನು ತಡೆಗಟ್ಟುವುದಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಲ್ಲಿ ಕೆಲವೊಂದು ಸೆಕ್ಷನ್‌ಗಳಿಗೆ ಕಾಲಂಗಳಿಗೆ ತಿದ್ದುಪಡಿಯನ್ನು ತಂದಿದ್ದೇವೆ. ಈಗಾಗಲೇ ಬಿಹಾರ ಮತ್ತು ಆಂಧ್ರಪ್ರದೇಶಗಳಲ್ಲಿ ಈ ತರಹ ನಡೆಯುತ್ತಾ

ಇದೆ. ಹಳ್ಳಿಗಳಲ್ಲಿ ಮಾರತಕ್ಕ ವ್ಯಾಪಾರ ಮಾಡತಕ್ಕ ಅಂತಹ ವ್ಯವಹಾರಗಳನ್ನು ನಿರ್ಭಂಧ ಮಾಡಿದ್ದಾರೆ. ಅವರು ಮಾರ್ಕೆಟ್‌ಗೆ ತಂದು ಮಾರಬೇಕು ಆ ತರಹ ಕಾನೂನು ಮಾಡಿದ್ದಾರೆ. ಮದ್ರಾಸ್‌ನಲ್ಲಾ ಕೂಡ ಆದೇರೀತಿ ಮಾಡಬೇಕೆಂದು ಆಲೊಚನೆ ಮಾಡಿದ್ದಾರೆ. ನಮ್ಮ ರೈತರಿಗೆ ಒಳ್ಳೆಯ ರೇಟ್ ಸಿಗಬೇಕು, ರೈತರಿಗೆ ತೊಂದರೆಯಾಗಬಾರದು. ಆಳತೆಯಲ್ಲಾ ಕೂಡ ರೈತರಿಗೆ ಆಗತಕ್ಕ ಅನ್ಯಾಯ ಅಷ್ಟಿಷ್ಟಲ್ಲ. ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ, ನಾವು ಭತ್ತವನ್ನು ಹೆಚ್ಚಾಗಿ ಬೆಳೆಯುತ್ತೇವೆ. ಮಿಲ್ ಮಾಲೀಕರಿಗೆ ನಾವು ಕೊಡುವಾಗ ನಮ್ಮಲ್ಲಿ ಬಳ್ಳ ಎಂದು ಇರುತ್ತದೆ, ಅದರಲ್ಲಿ ತುಂಬಾ ಮೋಸ ಮಾಡುತ್ತಾರೆ. ಒಂದು ಬಳ್ಳ ಎಂದರೆ ಎರಡು ಸೇರು ಒಂದು ಪಾವು ಅಥವಾ ಅರ್ಧ ಪಾವು ಎಂದು ಭತ್ತ ತೆಗೆದುಕೊಂಡು ಹೋಗುತ್ತಾರೆ. ಈ ತರಹ ಮೋಸ ಆಗಬಾರದು, ಸರಿಯಾದ ತೂಕ ಮತ್ತು ರೇಟು ಸಿಗಬೇಕಾಗಿದ್ದರೆ ಮಾರ್ಕೆಟಿಗೆ ಒಂದು ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ವಿಧೇಯದ ಕಲಂ ೮ ಮತ್ತು ೮೫ಕ್ಕೆ ತಿದ್ದುಪಡಿಯನ್ನು ತಂದಿರತಕ್ಕದ್ದು, ಕಲಂ ೧೬ಕ್ಕೂ ಕೂಡ ತಿದ್ದುಪಡಿಯನ್ನು ತಂದಿದ್ದೆವೆ ಈ ೧೬ಕ್ಕೆ ತಿದ್ದುಪಡಿಯನ್ನು ತರತಕ್ಕಂಥ ಸಂದರ್ಭದಲ್ಲಿ ಸೆಕ್ಷನ್ ೧೧೭/೧೧೮ ಇದರಲ್ಲಿ, ಈ ಲೈಸೆನ್ಸ್ ಪಡೆದುಕೊಂಡು ವ್ಯಾಪಾರ ಮಾಡತಕ್ಕದ್ದು ಮತ್ತು ಸೆಸ್ ಕೊಡದೇ ಇರತಕ್ಕದ್ದು ಎಂದರೆ ೧೧೮ರಲ್ಲಿ ಯಾರು ಸಸ್‌ಕೊಡುವುದಿಲ್ಲ, ಅಂತಹವರಿಗೆ ಶಿಕ್ಷೆ ವಿಧಿಸಿದ್ದೇವೆ ಶಿಕ್ಷೆ ವಿಧಿಸಿದ್ದರೂ ಪುನಃ ಕಮಿಟಿಗಳಲ್ಲಿ ಮೆಂಬರ್ ಆಗಿ ಪುನಃ ಅವ್ಯವಹಾರಗಳಿಗೆ ಕಾರಣರಾಗುತ್ತಾರೆ ಎನ್ನುವ ದೃಷ್ಟಿಯಿಂದ ಇವರು ಮೆಂಬರ್ ಆಗಬಾರದು ಎಂದು ಕಲಂ ೧೬ರಲ್ಲಿ ಇದನ್ನು ಅಳವಡಿಸಿ ಸೆಕ್ಷನ್ ೮೦ ರಲ್ಲಿ ಬರತಕ್ಕಂಥ ಶಿಕ್ಷೆಗೆ ಅರ್ಹರಾಗುತ್ತಾರೆ ಮತ್ತು ಅಂತಹವರು ಸಮಿತಿಗಳಲ್ಲಿ ಸದಸ್ಯರಾಗುವುದಕ್ಕೆ ಅನರ್ಹ ರಾಗುತ್ತಾರೆ ಎನ್ನುವುದನ್ನು ಕಲಂ ೧೧೬ರಲ್ಲಿ ಅಳವಡಿಸಿದ್ದೇವೆ. ಕಲಂ ೧೪ಳಿರಲ್ಲಿ ಮಾರುಕಟ್ಟೆ ಸಮಿತಿಗಳು ಸುಸೂತ್ರವಾಗಿ ನಿರ್ವಹಣೆಯಾಗಿ ನಡೆಯಬೇಕು ಏಕೆಂದರೆ ಆಗಾಗ್ಗೆ ಅವಿಶ್ವಾಸ ನಿರ್ಣಯ ತಂದು ಅಧ್ಯಕ್ಷರಾಗಿರತಕ್ಕಂಥವರನ್ನು ಇಳಿಸತಕ್ಕ ಪ್ರವೃತ್ತಿಇದೆ. ಇದನ್ನು ತಪ್ಪಿಸುವುದ ಕ್ಕೋಸ್ಕರ ಕೊನೆಯಪಕ್ಷ ಆಲ್ಲರತಕ್ಕಂಥ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮೇಲೆ ಒಂದು ಸಾರಿ ಅವಿಶ್ವಾಸ ನಿರ್ಣಯ ತಂದು ಅದು ಬಿದ್ದುಹೋದರೆ ಮುಂದೆ ಒಂದು ವರ್ಷದ ವರೆಗೆ ಯಾವ ಅವಿಶ್ವಾಸ ನಿರ್ಣಯವನ್ನೂ ತರಬಾರದು ಎನ್ನುವ ನಿರ್ಬಂಧವನ್ನು ಅಳವಡಿಸಿ ಕಲಂ ೧೪ಳಿರಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಮತ್ತು ಕಲಂ ೬೫ಕ್ಕೂ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರಲ್ಲಿ ಒರಿಜಿನಲ್ ಆಕ್ಟ್‌ನಲ್ಲಿ ದಳ್ಳಾಳಿಗಳು ವ್ಯಾಪಾರಸ್ಥರು ತಪ್ಪುಮಾಡಿದರೆ ಪೆನಾಲ್ಟಿ ಹಾಕುವಾಗ 'may' ಎಂದು ಇತ್ತು 'may' ಎಂದರೆ ಡಿಸ್ಕ್ರಿಶನರಿ ಪವರ್ ಇದ್ದಹಾಗೆ. ಹಾಕಿದರೆ ಹಾಕ ಬಹುದು, ಬಿಟ್ಟರೆ ಬಿಡಬಹುದು, ಕೆಲವೊಮ್ಮೆ ಬಿಟ್ಟುಬಿಡುತ್ತಿದ್ದರು. ಇದನ್ನು ಮ್ಯಾಂಡೆಟರಿ ಮಾಡಬೇಕೆಂದು 'may' ಬದಲು 'shall' ಎಂದು ಸೇರಿಸಿದ್ದೇವೆ. ಇದನ್ನು ಕೂಡ ಮಾನ್ಯ ಸದಸ್ಯರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ೧೧೭ನೇ ಕಲಂನಲ್ಲಿ ಕೋರ್ಟು ತೀರ್ಮಾನ ಆಗಿ ಫೈನ್ ಹಾಕತಕ್ಕಂಥ ಸಂದರ್ಭದಲ್ಲಿ ಯಾರು ತಪ್ಪಿತಸ್ಥರಾಗುತ್ತಾರೆ ಅಂತಹವರಿಗೆ ಎನು ಆಗುತ್ತಿತ್ತು ಎಂದರೆ ಆರು ತಿಂಗಳು ಕಾರಾಗೃಹ ಶಿಕ್ಷೆ ವಿಧಿಸಬಹುದು ಮತ್ತು ಮೂರ ಸಾವಿರವರೆಗೆ ದಂಡ ಹಾಕಬಹುದು ಎಂದು ಇತ್ತು. ಇದರಲ್ಲಿ ಒಬ್ಬರಿಗೆ ದಂಡ ಹಾಕಿದರೂ ಕೂಡ ಅದು ೩ಸಾವಿರದ ವರೆಗೆ ಇರುವಾಗ ೫ ಸಾವಿರರೂಪಾಯಿ ದಂಡ ಹಾಕಿ ಬಿಟ್ಟುಬಿಡುತ್ತಿದ್ದರು. ಈಗ ನಾವು ಏನು ಮಾಡಿದ್ದು ಎಂದರೆ ಕೊನೆಯ ಪಕ್ಷ ಫೈನ್ ವಿನಿಮಯ ಎಂದು ಮಾಡಿ ಅದನ್ನು ಕನಿಷ್ಟ ಐನೂರು ರೂಪಾಯಿಗಳಿಗಿಂತ ಕಡಿಮೆ ಹಾಕಬಾರದು. ಮತ್ತು ೫ ಸಾವಿರಗಿಂತ ಜಾಸ್ತಿಹಾಕಬಾರದು ಎಂದು ೧೧೭ನೇ ಕಲಂನಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ.

ಆಮೇಲೆ ೧೧೭(ಅ) ಇದು ಹೊಸದು. ಈವರೆಗೆ ದಳ್ಳಾಳಿಗಳಾಗಲೀ, ವ್ಯಾಪಾರಸ್ಥರಾಗಲೀ ಅಕೌಂಟ್ಸ್‌ನ್ನು ತಪಾಸಣೆಗೆ ಕೊಡುತ್ತಿರಲಿಲ್ಲ. ಇಂಥಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇದನ್ನು ತರಲಾಗಿದೆ. ಈ ವರೆಗೆ ಈ ವಿಚಾರದಲ್ಲಿ ಕೋರ್ಟಿಗೆ ಹೋದ ಉದಾಹರಣೆಗಳು ಇವೆ. ಅಂಥಾದ್ದು ಒಂದು ರಾಧಾಕೃಷ್ಣ ಇಂಡಸ್ಟ್ರೀಸ್ ವರ್ಸಸ್ ಬಳ್ಳಾರಿ ಎ. ಪಿ. ಎಂ. ಸಿ. ಈ ವಿವಾದದಲ್ಲಿ ಆಕ್ಟ್‌ನಲ್ಲಿ ಶಿಕ್ಷೆ ಮಾಡತಕ್ಕಂಥ ಕಲಂ ಇಲ್ಲದೇ ಇರುವುದರಿಂದ ಏನೂ ಮಾಡುವುದಕ್ಕಾಗುತ್ತಿರಲಿಲ್ಲ. ಅದಕ್ಕೋಸ್ಕರ ಹೊಸದಾಗಿ ೧೧೭(ಅ) ಎನ್ನುವುದನ್ನು ಸೇರಿಸಿ, ಕಡ್ಡಾಯವಾಗಿ ಅಕೌಂಟ್ ಕೊಡಬೇಕು ಇಲ್ಲದೆ ಹೋದರೆ ಶಿಕ್ಷೆಗೆ ಒಳಗಾಗುತ್ತೀರಿ ಎನ್ನುವುದನ್ನು ತಂದಿದ್ದೇವೆ. ಅನಂತರ ಕಲಂ ೧೧೮, ೭೮, ೭೯, ೮೦ ಮತ್ತು ೧೧೭ ಮತ್ತು ೧೧೮, ಯಾರು ಒಂದು ಸಾರಿ ತಪ್ಪು ಮಾಡುತ್ತಾರೆ ಅಂತಹವರಿಗೆ ನಾವಿನಲ್ ಶಿಕ್ಷೆ ವಿಧಿಸಿ, ನಂತರ ಮತ್ತೆ ಮತ್ತೆ ಅವರು ತಪ್ಪು ಮಾಡುತ್ತಾ ಹೋದರೆ, ಅಂತಹವರಿಗೆ ಕಾರಾಗೃಹವಾಸ ಕಡ್ಡಾಯವೆಂದು ಇಲ್ಲಿ ೧೧೮ ಕಲಂನಲ್ಲಿ ತಂದಿದ್ದೇವೆ. ಕೊನೆಯದಾಗಿ, ೧೨೯ ಕಲಂನಲ್ಲಿ

ನಾವು ಮಾಡಿರತಕ್ಕಂಥದ್ದು, ಚೀಫ್ ಮಾರ್ಕೆಟಿಂಗ್ ಆಫೀಸರ್ ಯಾರಿದ್ದಾರೆ ಅವರಿಗೆ, ಯಾರು ತಪ್ಪು ಮಾಡುತ್ತಾರೆ, ಕಾನೂನಿಗೆ ವಿರುದ್ಧವಾಗಿ, ಎ. ಪಿ. ಎಂ. ಸಿ. ಗಳಿಗೆ, ಅದರ ವ್ಯವಹಾರಗಳ ತದ್ವಿರುದ್ಧವಾಗಿ ನಡೆಯತಕ್ಕಂಥ ಪ್ರಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ತೆಗೆಯುವುದಕ್ಕೆ ಅವಕಾಶ ಇದೆ. ಸದಸ್ಯರನ್ನು ತೆಗೆಯುವುದಕ್ಕೆ ಅವಕಾಶ ಇಲ್ಲ ಕೆಲವು ದೊಡ್ಡ ದೊಡ್ಡ ಸದಸ್ಯರು ಇರುತ್ತಾರೆ ಅವರನ್ನು ತೆಗೆಯುವುದಕ್ಕೆ ಕಮಿಟಿ ರೆಸಲ್ಯೂಷನ್ ಮಾಡುವುದಕ್ಕೇ ಬಿಡುವುದಿಲ್ಲ. ಇಂತಹ ಸಂದರ್ಭದಲ್ಲಿ, ಯಾರು ಪವರ್‌ಫುಲ್ ಲಾಭಿ ಮಾಡಿ, ಅವರೇ ಉಳಿದು ಕೊಳ್ಳುತ್ತಾರೆ, ಮತ್ತು ಎ. ಪಿ. ಎಂ. ಸಿ. ಯಿಂದ ಲಾಭ ಮಾಡಿಕೊಳ್ಳುತ್ತಾರೆ ಅಂಥಹವರನ್ನು ತೆಗೆಯುವುದಕ್ಕೆ ಚೀಫ್ ಮಾರ್ಕೆಟಿಂಗ್ ಆಫೀಸರ್‌ಗೆ ಸೊ ಮೊ ಟೋ ಎನ್‌ಕ್ವೈರಿ ಮಾಡಿ, ಅಂತಹ ವರನ್ನು ತೆಗೆಯುವುದಕ್ಕೆ ೧೨೯ ಕಲಂ ತಂದು ಅವರಿಗೆ ಅಧಿಕಾರ ಕೊಡುತ್ತಿದ್ದೇವೆ. ೮-೯ ಕಲಂಗಳ ತಿದ್ದುಪಡಿಗಳನ್ನು ರೈತರ ಹಿತದೃಷ್ಟಿಯಿಂದ ಮತ್ತು ಎ. ಪಿ ಎಂ. ಸಿ. ಗಳ ಹಿತದೃಷ್ಟಿಯಿಂದ ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ಒಕ್ಕೊರಲಿನಿಂದ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ಪಾಟೀಲ್. — ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಪ್ಪನವರು ಹೊಸದಾಗಿ ಮಾರುಕಟ್ಟೆ ಮತ್ತು ಕೃಷಿ ಉತ್ಪನ್ನಗಳ ವಿಂಗಡಣೆ ಮಂತ್ರಿಗಳಾಗಿದ್ದಾರೆ, ನನಗೆ ಬಹಳ ಸಂತೋಷ. ಹಿಂದೆ ಮಾಡಿದ ಆರ್ಡಿನೆನ್ಸ್‌ನ್ನು ಬಿಲ್ಲಿನ ರೂಪದಲ್ಲಿ ಈಗ ತಂದು ಉತ್ತಮವಾದ ಸರಣಿಯಲ್ಲಿ ರೈತರ ಬೆಂಗಾವಲಿಗೆ ಉಪಯೋಗವಾಗುವಂತೆ ಭಾಷಣ ಮಾಡಿದ್ದಾರೆ. ಹಿಂದೆ ಮಾನ್ಯ ಜಾಲಪ್ಪನವರೂ ಇಂತಿದ್ದುಪಡಿಯನ್ನು ತರುವಾಗಲೂ ನಾನು ಸ್ವಾಗತ ಮಾಡಿದ್ದೆ. ಒಂದು ಮಾತು ನಿಜ, ಮಾರ್ಕೆಟ್ ಯಾರ್ಡಿನಲ್ಲಿ ಕೆಲವು ಅಪರಾಧಗಳನ್ನು ಮಾಡಿದ್ದಾರೆ. ಸಹಕಾರ ಸಂಘಗಳವರು ಆಫ್ಸಿ ಖರೀದಿ ಮಾಡಬಹುದು ಉಳಿದವರು ಮಾತ್ರ ಮಾರ್ಕೆಟ್ ಯಾರ್ಡ್ ಏರಿಯಾ ಬಿಟ್ಟು ಖರೀದಿಮಾಡುವಾರದು ಎಂದು ಮಾಡಿದ್ದಕ್ಕೆ ಸಹಕಾರಿಸಂಘಗಳವರು ಖರೀದಿ ಮಾಡಿದಕ್ಕೆ ರೆಕಾರ್ಡ್ ಸಿಗುತ್ತದೆ, ಉಳಿದವರು ಮಾಡಿದರೆ ಕೃಷ್ಣನ ಲೆಕ್ಕ ರಾವಣ ಲೆಕ್ಕಕ್ಕೆ ಹೋಗುತ್ತದೆ ಇದು. ಆದುದರಿಂದ ಮಾರ್ಕೆಟ್ ಯಾರ್ಡಿನಲ್ಲಿಯೇ ಖರೀದಿ ಮಾಡಬೇಕು. ಇವರೂ ಸರಿಯಾದ ಲೆಕ್ಕ ಬರಬೇಕೆಂದು ಮಾಡಿದ್ದಾರೆ. ಇದು ನಿಜವಾಗಿಯೂ ಸದಭಿಪ್ರಾಯದ ಬಿಲ್ಲು. ಅನಂತರ ಪೆನಾಲ್ಟಿ ಇಂಪೋಸ್ ಮಾಡುವಹಾಗೆ ಮಾಡಿದ್ದಾರೆ. ಷಿ ಸಾವಿರ ಏಕೆ ಮಾಡಬೇಕಾಗಿತ್ತು. ೧೦ ಸಾವಿರ ಎಂದು ಹೇಳಿದ್ದರೂ ಸರಿಯಾಗಿತ್ತು, ಅದನ್ನು ನಾನು ಒಪ್ಪುತ್ತಿದ್ದೆವು.

12.00 Noon

ಎತಕೆಂದರೆ ನಿಜವಾಗಿಯೂ ರೈತರ ರಕ್ತವನ್ನು ಹೀರುವಂತಹ ಏಜೆಂಟರು ಇದ್ದಾರೆ ಇಂತಹ ಏಜೆಂಟರ ಬಗ್ಗೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದು ಅನಿವಾರ್ಯ. ಇಂತಹವರ ಬಗ್ಗೆ ಉಗ್ರಕ್ರಮವನ್ನು ಯಾರೇ ತೆಗೆದುಕೊಂಡರೂ ನಾವು ಅದನ್ನು ಸ್ವಾಗತ ಮಾಡುತ್ತೇವೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ ಇದೇ ರೀತಿಯಾಗಿ ಆಲ್ಲಿನ ಚೇರ್ಮನ್‌ರು ಅವ್ಯವಹಾರ ಮಾಡಿದರೆ, ದುರ್ವ್ಯಹಾರ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಚೀಫ್ ಮಾರ್ಕೆಟಿಂಗ್ ಆಫೀಸರ್‌ರವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಯಾವ ತರಹದ ಅಭ್ಯಂತರವೂ ಇಲ್ಲ. ಆದರೆ ಒಂದು ಮಾತ್ರ ಮಾನ್ಯ ನಿಜ, ನಾವು ಸ್ವಾಗತ ಮಾಡಿ ಮಾಡಿ ನಿಮಗೆ ಅಧಿಕಾರ ಕೊಟ್ಟರೂ ಸಹ ಆ ಅಧಿಕಾರವನ್ನು ನಡೆಸುವುದಕ್ಕೆ ನಿಮಗೆ ಆಗುತ್ತದೆಯೇ ಎಂಬ ಆತಂಕವನ್ನು ನಾವು ತಳೆಯು ಬೇಕಾಗುತ್ತದೆ. ಇವತ್ತು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ಯಾರ್ಡ್ ಒಳಗೇ ಕೆಲಸ ಮಾಡ ಬೇಕೆಂದು ಹೇಳಿದ್ದೀರಿ. ಆದರೆ ಎಷ್ಟು ಮಾರ್ಕೆಟ್ ಕಮಿಟಿಗಳು ಯಾರ್ಡ್ ಒಳಗೆ ಕೆಲಸ ಮಾಡುವುದಕ್ಕೆ ಹತ್ತಿವೆ ಎಂದು ಹೇಳುತ್ತೇನೆ. ತಾವು ಇದರ ಬಗ್ಗೆ ಆಲೋಚನೆ ಮಾಡಿ. ಇವತ್ತು ಸರ್ಕಾರದವರು ಇಲ್ಲಿ ಕುಳಿತು ಉಳಿಕೆಯವರು ೫ ರೂಪಾಯಿ ೧೦ ರೂಪಾಯಿ ಲಂಚ ತೆಗೆದುಕೊಂಡರು ಎಂದು ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ. ನಿಜವಾಗಿಯೂ ಈ ರಾಜ್ಯದ ಬೊಕ್ಕಸವನ್ನು ಬರಿದು ಮಾಡುವಂತಹ, ರೈತರ ರಕ್ತವನ್ನು ಹೀರುವಂತಹ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿವೆ. ಇವುಗಳ ಬಗ್ಗೆ ಯಾವ ತನಿಖೆಯನ್ನು ಮಾಡುತ್ತಿದ್ದೀರಿ ? ಒಂದು ಉದಾಹರಣೆಗಾಗಿ ಹೇಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಶೇಂಗಾ ಅಂದರೆ ಕಡಲೆಕಾಯಿಯನ್ನು ಜಾಸ್ತಿ ಬೆಳೆಯುತ್ತಾರೆ. ಕಡಲೆಕಾಯಿ ಬೆಳೆದುದು ಎಷ್ಟು ಬುಕ್ಕಿಗೆ ಬರುತ್ತದೆ ಎಷ್ಟು ಬರುವುದಿಲ್ಲ ಎಂಬುದರ ಬಗ್ಗೆ ಅಂಕಿ ಸಂಖ್ಯೆಗಳನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತೆಗೆದುಕೊಂಡು ನೋಡಿದಾಗ ಗೊತ್ತಾಗುತ್ತದೆ. ಬಣ್ಣ ಎಷ್ಟಾಗುತ್ತದೆ, ಎಷ್ಟು ಎಲೆಕ್ಟ್ರಿಸಿಟಿ ಖರ್ಚಾಗುತ್ತದೆ ಎಂಬುದರ ಬಗ್ಗೆ ಮೂರು ಜನ ಮಾನ್ಯ ಸಚಿವರುಗಳು ಕುಳಿತು ಮಾತನಾಡಿದರೆ ಸಾಕು ಗೊತ್ತಾಗುತ್ತದೆ. ಎಲೆಕ್ಟ್ರಿಸಿಟಿ ಇಷ್ಟು ಖರ್ಚಾಗಿದೆ ಎಂದ ಮೇಲೆ ಅಷ್ಟು ಕಡಲೆಕಾಯಿಯನ್ನು ಸುರಿದಿರಲೇ ಬೇಕು. ಎಣ್ಣೆ ತಯಾರಿಸಿರಬೇಕು. ಸುರಿಯದೇ ಇದ್ದ ಪಕ್ಷದಲ್ಲಿ ಅದು ಎಲ್ಲಿ ಹೋಗಿದೆ ? ಇವತ್ತು ಸರಕಾರದಲ್ಲಿ ರೊಕ್ಕ ಇಲ್ಲ, ರೊಕ್ಕ ಇಲ್ಲ ಎಂದು ಏನು ಕೊರಗುತ್ತಿದ್ದೀರಿ, ಆ ಕೊರಗು ಅರ್ಧಕ್ಕಿಂತ ಹೆಚ್ಚು ದೂರವಾಗುತ್ತದೆ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಒಳಗೆ ವ್ಯಾಪಾರಸ್ಥರು ಹೋಗುವುದಿಲ್ಲ ಎಂದರೆ ನೀವು ಮಾರ್ಲೆಟ್ಸ್ ಕಮಿಟಿಯವರಿಗೆ ಏನು ರಕ್ಷಣೆ ಕೊಡುತ್ತೀರಿ ? ಇವತ್ತು ಅನೇಕ ಕಡೆಗಳಲ್ಲಿ ಈ ರೀತಿ ಇದೆ. ಉದಾಹರಣೆ ಒಂದು ಹೇಳುತ್ತೇನೆ. ಎಷ್ಟೋ ಕಡೆ ಮಾರ್ಕೆಟ್ ಯಾರ್ಡ್‌ಗಳನ್ನು ಎಸ್ಟಾಬ್ಲಿಷ್ ಮಾಡಿರುತ್ತೀರಿ. ಬಲ್ಕ್ ಬ್ಯಾಂಕ್ ಸಾಲ ತೆಗೆದುಕೊಂಡಿರಿ. ವರ್ಲ್ಡ್ ಬ್ಯಾಂಕ್‌ನವರೂ ಬಹಳ ಉದಾರ ರೀತಿಯಿಂದ ಸಾಲ ಕೊಟ್ಟಿರು. ಮಾರ್ಕೆಟ್ ಕಟ್ಟಿದ್ದೀರಿ. ಗೋಡೌನ್ ಕಟ್ಟಿದ್ದೀರಿ. ಅಲ್ಲಿ ನಡೆದಿರುವಂತಹ ಕಾರ್ಯಕ್ರಮಗಳು ಏನು? ಏತಕ್ಕೆ ಸರಿ ಮಾಡಲಿಲ್ಲ. ? ಕೇವಲ ಎಲ್ಲವನ್ನೂ ಕಮಿಟಿಗಳ ಮೇಲೆ ಹಾಕಿದರೆ ಉಪಯೋಗ ಇಲ್ಲ. ಅಧಿಕಾರಸ್ಥರು ಏನು ಮಾಡುತ್ತಿದ್ದಾರೆ. ಗೌರ್ನಮೆಂಟ್ ಸೆಕ್ರೆಟರಿಗಳನ್ನು ಎಲ್ಲಾ ಕಡೆಗೂ ಹಾಕಿದ್ದೀರಿ. ಆ ಸೆಕ್ರೆಟರಿಗಳು ಯಾವರೀತಿ ಕೆಲಸ ಮಾಡುತ್ತಿತ್ತಾರೆ. ಉಳಿಕೆಯವರನ್ನು ಬಿಡಿ, ಮಂತ್ರಿಗಳು ಯಾವ ಯಾವ ಊರಿನಿಂದ ಬರುತ್ತಿದ್ದಾರೆ, ಮಂತ್ರಿಗಳ ಏರಿಯಾದೊಳಗೆ ಏನೇನು ನಡೆಯುತ್ತಿದೆ ಎಂಬುದನ್ನು ನೀವು ಲಕ್ಷ್ಯಕ್ಕೆ ಹಾಕಿಕೊಳ್ಳಿ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳು ಇದ್ದರೂ ಸಹ ಕೆಲಸ ಮಾಡದ ಹಾಗೆ ಆಗಿವೆ. ಮಾರ್ಕೆಟಿಂಗ್ ಸೊಸೈಟಿಗಳು ಇದ್ದರೂ ಕೆಲಸ ಮಾಡುವುದಿಲ್ಲ. ಇದರ ಬಗ್ಗೆ ಯಾವ ಆಲೋಚನೆ ಮಾಡಿದ್ದೀರಿ ಎಂದು ನಾನು ತಮ್ಮನ್ನು ಕೇಳುತ್ತೇನೆ. ಇವತ್ತು ಅನೇಕ ರೀತಿಯಿಂದ ಸರಕಾರದವರು ರೆಗ್ಯುಲೇಷನ್ ಮಾಡುತ್ತಾರೆ. ಇನ್ನೊಂದು ರೀತಿಯಿಂದ ಅದು ಸರಿಯಾಗಿ ಜಾರಿಯಾಗದ ರೀತಿ ಹೋಗುತ್ತದೆ. ಒಂದು ಉದಾಹರಣೆ ಹೇಳುತ್ತೇನೆ. ಯಾವ ಎನ್‌ಕ್ವೈರಿ ಮಾಡುತ್ತೀರಿ ಮಾಡಿರಿ ಮಲ್ಲಪ್ಪನವರೇ, ಗದಗ್‌ನಲ್ಲಿ ಆರ್.ಎಂ.ಸಿ. ಎಸ್ಟಾಬ್ಲಿಷ್ ಆಗಿ ಬಹಳ ವರ್ಷ ಆಯಿತು. ನಾನು ಸುಮಾರು ೨೦ ವರ್ಷಗಳ ಕಾಲ ಅದರಲ್ಲಿ ಇದ್ದೆ. ಎಷ್ಟೇ ಕಷ್ಟ ಬಂದರೂ, ನಿಷ್ಠೂರವಾದರೂ ಅದನ್ನು ಎಸ್ಟಾಬ್ಲಿಷ್ ಮಾಡಿದೆ. ಮಾರ್ಕೆಟ್ ಯಾರ್ಡ್ ಹೊರಗೆ ಹೋಗುವುದಕ್ಕೆ ಜಿತಲಿಲ್ಲ. ಮಾರ್ಕೆಟ್ ಒಳಗಿರತಕ್ಕಂಥ ಜನ ಏನೋ ಮಾಡಿ ದಂದು ಕಾಂಪೌಂಡ್ ಮಾಡಿ ಮಾರ್ಕೆಟ್ ಯಾರ್ಡ್ ಎಂದು ಎಸ್ಟಾಬ್ಲಿಷ್ ಮಾಡಿದರು. ಮಾಡಿದ ಮೇಲೆ ಅಲ್ಲಿಗೆ ಹೋಗುತ್ತೇವೆ ಎಂದರೆ ಅವಕಾಶ ಇಲ್ಲ. ಅನೇಕ ವ್ಯಾಪಾರಸ್ಥರು ಅತ್ತ ಬರುತ್ತಿದ್ದಾರೆ. ಆಮೇಲೆ ಅಂತಿಮವಾಗಿ ಜಾಲಪ್ಪನವರು ಬಹಳ ನಿಷ್ಠೂರವಾಗಿ ಮಾರ್ಕೆಟ್ ಯಾರ್ಡ್ ಎಸ್ಟಾಬ್ಲಿಷ್ ಮಾಡುವುದಕ್ಕೆ ಶುರು ಮಾಡಿದರು. ಆಂದರೆ ಅಲ್ಲಿಗೆ ಇವರು ಹೋಗುವುದರ ಒಳಗೆ ಯಾರ್ಡ್ ಹತ್ತಿರ ಮುನಿಸಿಪಾಲಿಟಿ ಜಾಗದಲ್ಲಿ ವಠಾರಗಳನ್ನು ಕಟ್ಟಿಸಿ, ೧೫-೧೫ ಸಾವಿರ ತೆಗೆದುಕೊಂಡು ಒಂದೊಂದು ವಠಾರ ಕೊಟ್ಟಿದ್ದಾರೆ. ಇದಕ್ಕೆ ಯಾರು ಯಾರು ದುಡ್ಡು ತೆಗೆದುಕೊಂಡಿದ್ದಾರೆ ಎಷ್ಟು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಯಾರು ಈ ವಿಜೆಂಟರು ಇವ್ವಾರೆ ಇವರು ನಿಮ್ಮ ಹಿಂದೆ ಅಡ್ಡಾಡುವವರು, ನಿಮ್ಮ ಪಕ್ಷದಲ್ಲಿ ಇದ್ದೇವೆ ಎಂದು ಹೇಳಿಕೊಂಡು ಅಡ್ಡಾಡುವವರು. ಇವರು ನಿಮ್ಮ ಪಕ್ಷದವರಲ್ಲ, ಅಧಿಕಾರಕ್ಕೆ ಬಂದ ಪಕ್ಷದವರು. ನಾನು ಅಧಿಕಾರಕ್ಕೆ ಬಂದ್ರೆ ನನ್ನ ಹಿಂದೆ ಅಡ್ಡಾಡುತ್ತಾರೆ. ನೀವು ಅಧಿಕಾರಕ್ಕೆ ಬಂದರೆ ನಿಮ್ಮ ಹಿಂದೆ ಅಡ್ಡಾಡುತ್ತಾರೆ. ಇವರು ಹಣ ಕೂಡಿಸಿಕೊಂಡು, ನಿಮ್ಮನ್ನು ಪರಿಚಯ ಮಾಡಿಕೊಂಡು, ಒಳಕ್ಕೆ ಬಂದು ಏನ್ರಿ ಪಟೇಲರೇ ಆರಾಮ ಇದ್ದೀರೆನ್ರಿ ಎಂದು ಹೇಳಿ ಕೊಂಡು ಪಟೇಲರ ಹತ್ತಿರ ಹೇಳಿಬಿಟ್ಟು ಬಂದಿದ್ದೀನಿ ಎಂದು ಹೇಳುವಂತಹ ಜನ ಏನಿದ್ದಾರೆ, ಇವರ ಬಗ್ಗೆ ಏನು ಆಲೋಚನೆ ಮಾಡುತ್ತೀರಿ ? ಹೀಗೆ ಕೊಡತಕ್ಕದ್ದು ತಪ್ಪು ಎಂದು ಕೋರ್ಟಿನವರು ಎರಡು ಬಾರಿ ಹೇಳಿದರು. ಮುನಿಸಿಪಾಲಿಟಿಯಲ್ಲಿ ರೊಕ್ಕ ಇಲ್ಲ ಎಂದು ಹೇಳುತ್ತಿದ್ದೀರಿ ಅದಕ್ಕೆ ಇದೂ ಕಾರಣ. ಮುನಿಸಿಪಾಲಿಟಿಯವರು ಇದನ್ನೆಲ್ಲಾ ಮಾಡಬೇಕೆಂದು ಹೇಳಿದರು. ಮುನಿಸಿಪಾಲಿಟಿಯ ಮಿನಿಸ್ಟರ್‌ರವರು ಇಲ್ಲಿ ಇಲ್ಲ, ಅವರಿಗೆ ಇದು ಸರಿಯಾಗಿ ಗೊತ್ತಿಲ್ಲ. ನಮ್ಮ ಲಾ ಮಿನಿಸ್ಟರ್‌ಗೆ ಇದು ಚೆನ್ನಾಗಿ ಗೊತ್ತಿದೆ. ಅವರಿದ್ದಾಗ ಉತ್ತಮವಾದ ಕೆಲಸ ಮಾಡಿದರು. ಆದರೆ ಕೈಮೀರಿ ಹೋಯಿತು. ಅವರು ಇದನ್ನು ಸರಿಮಾಡಬೇಕೆನ್ನುವುದರ ಒಳಗೆ ಅವರನ್ನು ಆ ಖಾತೆಯಿಂದ ತೆಗೆದು ಬಿಟ್ಟರಿ, ಅದು ಏನೇ ಇರಲಿ, ಇವೊತ್ತಿನದಿವಸ ಅಲ್ಲಿ ಲಂಚದ ವಿಷಯ ಪ್ರಸ್ತಾಪವಾಗುತ್ತಿದೆ, ಇದನ್ನು ತಾವು ವಿಚಾರ ಮಾಡಬೇಕು. ರೈತರು ತಂಪಂಥ ಮಾಲು ಪೂರ್ತಿಯಾಗಿ ಮಾರ್ಕೆಟ್ ಯಾರ್ಡಿಗೆ ಹೋಗಬೇಕೆಂಬ ನಿಯಮವಿದ್ದರೂ ಸಹ ಕೆಲವರು ಸೇರಿಕೊಂಡು ಅಲ್ಲಿ ಮಾರ್ಕೆಟ್‌ಯಾರ್ಡಿಗೆ ಹೋಗದಂತೆ ಅಡ್ಡಿಪಡಿಸುತ್ತಿದ್ದಾರೆ. ಇದು ತಪ್ಪಬೇಕು. ರೈತರಿಗೆ ಅನುಕೂಲ ಮಾಡಿಕೊಡ ಬೇಕೆಂದು ನೀವು ನಾನಾ ರೀತಿಯ ಕಾನೂನುಗಳನ್ನು ಜಾರಿಯಲ್ಲಿ ತರುತ್ತಿದ್ದರೂ ಸಹ ಕೆಲವು ಜನರು ಸೇರಿಕೊಂಡು ಅಲ್ಲಿ ಏನು ಮೋಸಗಾರಿಕೆ ಕೆಲಸವನ್ನು ನಡೆಸುತ್ತಿದ್ದಾರೆ ಅವನ್ನು ನೀವು ಕೂಡಲೇ

ಬಂದ್ ಮಾಡಿಸಬೇಕು. ಈ ಒಂದು ಕೆಲಸವನ್ನು ನೀವು ಮಾಡಿದ್ದೇ ಆದರೆ ನಿಮ್ಮ ಹೆಸರು ಹಾಗೂ ನಿಮ್ಮ ಕೆಲಸ ಸ್ಥಿರವಾಗಿ ಉಳಿಯುತ್ತದೆಯೇ ಹೊರತು ಮಂತ್ರಿ ಪದವಿ ಎಂಬುದು ಶಾಶ್ವತವಾಗಿ ಉಳಿಯುವುದಿಲ್ಲ. ಆದ್ದರಿಂದ ಅಲ್ಲಿ ಈಗ ಮೋಸಗಾರಿಕೆ ಕೆಲಸ ಏನು ನಡೆಯುತ್ತಿದೆ. ಅದನ್ನು ತಡೆಗಟ್ಟಲು ನೀವು ನಿಷ್ಠೂರವಾಗಿ ಕೆಲಸ ಮಾಡಿ. ಅದಕ್ಕೆ ನಾವು ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ಕೆಲವೊಂದು ಸಲ ನಿಮ್ಮ ಮಗನೇ ಇರಲಿ ಅಥವಾ ನಿಮ್ಮ ಹೆಂಡತಿಯ ತಮ್ಮನೇ ಇರಲೀ. ಕಾನೂನಿಗೆ ವಿರುದ್ಧವಾದಂಥ ಕೆಲಸವನ್ನು ಏನಾದರೂ ಮಾಡಿದರೆ, ಅಂತಹವರ ಮೇಲೂ ಸಹ ನಿಷ್ಠೂರವಾದಂಥ ಕ್ರಮ ತೆಗೆದುಕೊಳ್ಳುತ್ತೆ ನೆಂಬ ನೀವು ದೃಢ ಪ್ರತಿಜ್ಞೆ ಮಾಡಬೇಕು ಮತ್ತು ಶಪಥ ಮಾಡಬೇಕು. ನೀವು ಈ ರೀತಿಯಿಂದ ಕೆಲಸ ಮಾಡಿದ್ದೇ ಆದರೆ ನಾವು ನಿಮ್ಮ ಕೆಲಸವನ್ನು ಸ್ವಾಗತ ಮಾಡುತ್ತೆ ವೆ. ಈಗ ನಡೆಯುತ್ತಿರುವ ಅವ್ಯವಹಾರಗಳನ್ನು ನಿ ವು ಕೂಡಲೇ ಬಂದ್ ಮಾಡಬೇಕು, ಒಮ್ಮೊಮ್ಮೆ ಏನಾಗುತ್ತದೆಂದರೆ, ಅವ್ಯವಹಾರಗಳನ್ನು ನಡೆಸುವಂಥವರ ಬಗ್ಗೆ ಅಲ್ಲಿನ ಅಧಿಕಾರಿಗಳು ನಿಷ್ಠೂರವಾದಂಥ ಕ್ರಮಗಳನ್ನು ತೆಗೆದುಕೊಳ್ಳಲು ಮನಸ್ಸು ಮಾಡುವುದಿಲ್ಲ. ಏಕೆಂದರೆ, ಅವರು ತಮ್ಮ ಮೇಲಿನವರು ಹೇಳಿದ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಇದು ತಪ್ಪಬೇಕಾದರೆ ನೀವು ಬಿಗಿಯಾದ ಕ್ರಮ ತೆಗೆದುಕೊಂಡರೆ ಅಧಿಕಾರಿಗಳು ಸಹ ಚೆನ್ನಾಗಿ ಕೆಲಸ ಮಾಡುತ್ತಾರೆ.

ಇನ್ನು ಮುಂಬೈ-ಕರ್ನಾಟಕ ಏರಿಯಾದಲ್ಲಿರುವಂಥ ಮಾರ್ಕೆಟಿಂಗ್ ಸೊಸೈಟಿಗಳು ಮೊದಲಿನಿಂದಲೂ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿವೆ. ಆದರೆ ಹಳೆಯ ಮೈಸೂರು ಭಾಗದಲ್ಲಿರುವಂಥ ಮಾರ್ಕೆಟಿಂಗ್ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಇವು ಬಲಶಾಲಿಗಳಾಗಿಲ್ಲ. ಆದ್ದರಿಂದ ಇದರ ಕಡೆಗೆ ಮಾನ್ಯ ಸಹಕಾರಿ ಸಚಿವರು ಗಮನಹರಿಸಿ ಸರಿಪಡಿಸಬೇಕು ಈಗ ಹಳೆಯ ಮೈಸೂರು ಭಾಗದಲ್ಲಿ ಮಾರ್ಕೆಟಿಂಗ್ ಕಮಿಟಿಗಳು ಹಾಗೂ ಮಾರ್ಕೆಟಿಂಗ್ ಸೊಸೈಟಿಗಳು ಏನಿವೆ, ಅವು ನನಗೆ ತಿಳಿದ ಪ್ರಕಾರ ಸರಿಯಾಗಿ ಕೆಲಸ ಮಾಡುವ ಬಗ್ಗೆ ವಿಫಲಗೊಂಡಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಇವುಗಳ ಕಡೆಗೆ ಹೆಚ್ಚಿನ ನಿಗಾವಹಿಸಿ ಅವು ಸರಿಯಾಗಿ ಕೆಲಸ ಮಾಡುವಂತಹ ವ್ಯವಸ್ಥೆ ಮಾಡಿದ್ದೇ ಆದರೆ ಇಡೀ ರಾಜ್ಯದಲ್ಲಿಯೇ, ಇಡೀ ನಾಡಿನಲ್ಲಿಯೇ ಈ ಒಂದು ಕೆಲಸ ಸಮರ್ಪಕವಾಗಿ ನಡೆಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗ ನೀವು ತಂದಿರುವ ತಿದ್ದುಪಡಿ ಮಸೂದೆ ಬಗ್ಗೆ ಏನು ನೀವು ಹೇಳಿದ್ದೀರಿ, ಅದಕ್ಕಿಂತಲೂ ಹೆಚ್ಚಾಗಿ ನಾನು ಅರ್ಥಮಾಡಿಕೊಂಡಿದ್ದೇನೆ. ಈಗ ಇದನ್ನು ನೀವು ತಂದಿರುವುದು ಸಮರ್ಪಕವಾಗಿದೆಯಲ್ಲದೆ ಸೂಕ್ತವೂ ಆಗಿದೆ. ಈ ಜಿಲ್ಲೆಗೆ ನಾನು ನಮ್ಮ ಪಕ್ಷದ ವತಿಯಿಂದ ಸಂಪೂರ್ಣವಾದಂಥ ಬೆಂಬಲವನ್ನು ಕೊಡುತ್ತೆ ನೆ. ಈ ತಿದ್ದುಪಡಿ ಮಸೂದೆಯನ್ನು ಇಲ್ಲಿ ಒಮ್ಮತದಿಂದ ಪಾಸ್ ಮಾಡಬೇಕೆಂದು ತಮ್ಮ ಪರವಾಗಿ ಎಲ್ಲರನ್ನೂ ಕೇಳಿಕೊಳ್ಳುತ್ತೇನೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕದ ಅಂದೆ ಇರುವಂತಹ ಉದ್ದೇಶದ ಬಗ್ಗೆ ನನ್ನ ಸ್ವಾಗತವಿದೆ. ಇದಕ್ಕೆ ಮಾನ್ಯ ಕೆ.ಎಚ್. ಪಾಟೀಲ್ ಅವರು ಬೆಂಬಲ ಕೊಟ್ಟಿದ್ದಾರೆ. ನಮ್ಮ ಬೆಂಬಲ ಸಹ ಇದಕ್ಕೆ ಇದೆ. ಮಾನ್ಯ ಸಚಿವರಾದಂಥ ಮಲ್ಲಪ್ಪನವರು ಈ ವಿಧೇಯಕವನ್ನು ತಂದಿರತಕ್ಕಂಥ ಉದ್ದೇಶವನ್ನು ಬಹಳ ಸರಳವಾಗಿ ಮತ್ತು ಬಹಳ ಪರಿಣಾಮಕಾರಿ ರೀತಿಯಲ್ಲಿ ಈ ಸಭೆಗೆ ವಿವರಿಸಿದ್ದಾರೆ. ಇದರ ಜೊತೆಗೆ ಸೂಕ್ಷ್ಮವಾಗಿ ನಾನು ಇವರ ಒಂದು ಕಾರ್ಯವೈಖರಿಯನ್ನು ಗಮನಿಸಿದ್ದೇನೆ. ಒಂದೊಂದು ಸಲ ಕೆಲವು ಮಂತ್ರಿಗಳು ಇಲ್ಲಿ ಕೆಲವೊಂದು ವಿಧೇಯಕಗಳ ಮೇಲೆ ಮಾತನಾಡುವಾಗ ವಿಧೇಯಕಗಳಲ್ಲಿ ಇದ್ದುದನ್ನು ಮತ್ತು ಹಿಲ್ಲದ್ದನ್ನು ಹೇಳಿ, ಸಭೆಯಲ್ಲಿ ಹೆಚ್ಚು ಗೊಂದಲವನ್ನುಂಟುಮಾಡುವ ಸಂದರ್ಭಗಳಿಲ್ಲಿ ಜಾಸ್ತಿಯಾಗಿ ಶ್ರಮವಹಿಸಿ ಈ ಕಾಲದಲ್ಲಿ ಮಾನ್ಯ ಮಲ್ಲಪ್ಪನವರು ಈ ವಿಧೇಯಕದ ಬಗ್ಗೆ ಬಹಳ ತಿಳಿಯಾಗಿ ಹೇಳಿದ್ದಾರೆ. ಒಂದೊಂದು ವಿಧಿಯ ಬಗ್ಗೆಯೂ ವಿವರಿಸಿ ಹೇಳಿದ್ದಾರೆ, ಬಹಳ ಸಂತೋಷ. ಅವಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ ಈಗ ನಾನು ಇಲ್ಲಿ ಬೇರೆ ವಿಚಾರಗಳ ಬಗ್ಗೆ ಮಾತನಾಡಬೇಕಾದದ್ದು ಏನೂ ಇಲ್ಲ. ಆದರೆ, ನೀವು ಇಲ್ಲಿ ಯಾವ ಉದ್ದೇಶಗಳನ್ನು ಇಟ್ಟುಕೊಂಡು ಇದರಲ್ಲಿ ಕೆಲವು ವಿಧಿಗಳನ್ನು ಅಳವಡಿಸಿದ್ದೀರೋ, ಆ ಉದ್ದೇಶಗಳು ನಿಜವಾಗಿಯೂ ಈಡೇರುತ್ತವೆಯೇ ಎಂಬ ಬಗ್ಗೆ ನಾನು ಈ ಸಂದರ್ಭದಲ್ಲಿ ಒಂದೆರಡು ಸಂದೇಹಗಳನ್ನು ವ್ಯಕ್ತಪಡಿಸುತ್ತೇನೆ. ಕೆಲವೆಲ್ಲಾ ಸಾಂದರ್ಭಿಕವಾಗಿ ಮಾಡತಕ್ಕಂಥ ತಿದ್ದುಪಡಿಗಳ . ಇದರ ಬಗ್ಗೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಮುಖ್ಯವಾಗಿ "To restrict the sale and purchase of notified agricultural or a market yard market sub-yard or sub-market yard except in cases of certain co-operative societies and sale of retail traders." ಇದರ ಬಗ್ಗೆ ಇರತಕ್ಕಂಥ ವಿಧಿ ಏನು ಇದೆ, ಇದರಿಂದ ಈ ಉದ್ದೇಶ ಈಡೇರುತ್ತದೆಯೇ ಎನ್ನತಕ್ಕ ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಹೇಳಿದ ಹಾಗೆ ಎರಡು ಇಲ್ಲಿ ಉದ್ದೇಶ ಇರತಕ್ಕಂಥದ್ದು. ಒಂದು, ರೈತ ಮಾರುಕಟ್ಟೆಗೆ ಬಾರದೇ ಅವನ ಮನೆ ಬಾಗಿಲಿಗೆ ಮಾರುಕಟ್ಟೆ ವ್ಯವಸ್ಥೆ ಮಾಡುವುದು. ಇಲ್ಲಿ ಏನಾಗುತ್ತದೆ ಎಂದರೆ, ನಮ್ಮ ಕಡೆ ಅಡಿಕೆಯನ್ನು ರೈತರು ಮನೆಯ ಹತ್ತಿರವೇ ಮಾರಿ ಬಿಡುತ್ತಾರೆ. ಮಾರ್ಕೆಟ್ ರೇಟ್ ಏನಿದೆ ಎಂಬುದನ್ನು ತಿಳಿದುಕೊಳ್ಳದೆಯೇ ರೈತನು ಸರಕನ್ನು ಮಾರಿಬಿಡುತ್ತಾನೆ. ಇದರಿಂದ ಸರ್ಕಾರಕ್ಕೆ ಬರತಕ್ಕಂಥ ತೆರಿಗೆಗೆ ವಂಚನೆಯಾಗುತ್ತದೆ. ರೈತನ ಮನೆಯೇ ಮಾರುಕಟ್ಟೆಯಾಗಿರುತ್ತದೆ. ಇದರಲ್ಲಿ ಕಾಗದ ಪತ್ರ ಗಳಿರುವುದಿಲ್ಲ, ಬರವಣಿಗೆ ಇರುವುದಿಲ್ಲ. ಅವರವರ ಒಂದು ರೀತಿಯಲ್ಲಿ ಪರಸ್ಪರ ತಿಳುವಳಿಕೆ ಮತ್ತು ನಂಬಿಕೆಗಳ ಆಧಾರದ ಮೇಲೆ ನೇರವಾಗಿ ಮಾಲನ್ನು ಮಾರಿಬಿಡುತ್ತಾರೆ. ಇದರಿಂದ ಕೊಂಡುಕೊಂಡ ವ್ಯಾಪಾರಸ್ಥರು ಎಲ್ಲಿಗೆ ಕಳುಹಿಸಬೇಕೋ ಅಲ್ಲಿಗೆ ರೈತನ ಹೆಸರಿನಲ್ಲೇ ಮಾಲನ್ನು ಕಳುಹಿಸಿಬಿಡುತ್ತಾರೆ. ಈ ರೀತಿ ಮಾಡುವುದರಿಂದ ಮಾರ್ಕೆಟ್ ಕಮಿಟಿಗೆ ಹಾಗೂ ಸರ್ಕಾರಕ್ಕೆ ಬರಬೇಕಾದಂಥ ತೆರಿಗೆ ವಂಚನೆ ಯಾಗುತ್ತದೆ. ಇದನ್ನು ತಪ್ಪಿಸುವುದಕ್ಕೂ ಸಹ ಇದರಲ್ಲಿ ಅವಕಾಶವಿದೆಯೆಂದು ಅವರು ಹೇಳಿದ್ದಾರೆ. ನಾನು ಸಹ ಇರಬೇಕೆಂದು ಭಾವಿಸಿಕೊಳ್ಳುತ್ತೇನೆ. ಆದರೆ, ಇವನ್ನು ತಪ್ಪಿಸುವುದಕ್ಕೆ ಆಗುತ್ತದೆಯೇ ಎಂದು ನಾನು ಕೇಳುತ್ತೇನೆ. ಈ ರೀತಿ ತೆರಿಗೆ ತಪ್ಪಿಸಿಕೊಳ್ಳುವುದನ್ನು ನೀವು ತುದಿರುವ ನಿಯಮದಿಂದ ತಡೆಗಟ್ಟುವುದಕ್ಕೆ ಸಾಧ್ಯವಿದೆಯೇ ಎಂದು ನಾನು ಕೇಳುತ್ತಿದ್ದೇನೆ. ಟ್ರೇಡರ್ ಗಳನ್ನು ಹಿಡಿದುಕೊಳ್ಳುವುದಕ್ಕೆ ಅವರು ನಿಮ್ಮ ಕೈಗೆ ಸಿಕ್ಕುವುದಿಲ್ಲ. ಅವನ ಪ್ರವೇಶವೇ ಮಾರ್ಕೆಟ್ ನಲ್ಲಿ ಇರುವುದಿಲ್ಲ. ಅವನು ಏನು ಮಾಡುತ್ತಾನೆ ಎಂದರೆ, ರೈತನ ಹೆಸರಿನಲ್ಲಿಯೇ ಈ ಎಲ್ಲಾ ಕೆಲಸ ವನ್ನು ಮಾಡಿಬಿಡುತ್ತಾನೆ. ರೈತನು ಸ್ವತಃ ಮಾರ್ಕೆಟ್‌ಗೆ ತನ್ನ ಪದಾರ್ಥವನ್ನು ತಂದು ಅವನೇ ನೇರವಾಗಿ ವಾರಾಟ ಮಾಡಿದರೆ ಯಾವ ಸಮಸ್ಯೆಯೂ ಬರುವುದಿಲ್ಲ. ಆದರೆ, ಹಾಗಾಗುತ್ತಿಲ್ಲ. ವ್ಯಾಪಾರಸ್ಥರು ರೈತನ ಬಳಿಗೆ ಹೋಗಿ ಅವರೇ ಮಾಲನ್ನು ಕೊಂಡುಕೊಂಡು ರೈತನ ಹೆಸರಿನಲ್ಲಿ ಸಾಗಾಣಿಕೆ ಮಾಡುವುದರಿಂದ ಮಾರ್ಕೆಟ್‌ಗೆ ಬರಬೇಕಾದ ಶುಲ್ಕ ಬರುವುದಿಲ್ಲ. ರೈತರು ವ್ಯಾಪಾರಸ್ಥರಿಗೆ ಶಾಮೀಲಾಗುತ್ತಾರೋ, ಅಥವಾ ರೈತರು ತಮ್ಮ ಹಿತದ ಕಲ್ಪನೆ ಇಲ್ಲದೆ ಶಾಮೀಲಾಗುತ್ತಾರೋ ಗೊತ್ತಿಲ್ಲ. ಆದ್ದರಿಂದ, ಯಾವುದೇ ಕಾರಣಕ್ಕಾಗಿಯಾಗಲೀ, ಈ ರೀತಿ ತೆರಿಗೆ ವಂಚನೆಯಾಗುವುದನ್ನು ತಡೆಗಟ್ಟಬೇಕು. ರೈತನ ಪರವಾಗಿ ತಾವು ಈ ತಿದ್ದುಪಡಿಯನ್ನು ತಂದಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲಿನಿಂದಲೂ ಸರ್ಕಾರಕ್ಕೆ ಬರುವ ತೆರಿಗೆಯನ್ನು ತಪ್ಪಿಸುವ ದಾರಿಯಲ್ಲೇ ವ್ಯಾಪಾರಸ್ಥರು ಕೆಲಸ ಮಾಡುತ್ತಾರೆ. ರೈತನು ಅವರ ಮುಷ್ಟಿಯಲ್ಲಿ ಸಿಕ್ಕಿಕೊಂಡು ಪರೋಕ್ಷವಾಗಿ ತೆರಿಗೆ ವಂಚನೆಯನ್ನು ಸರ್ಕಾರಕ್ಕೆ ಮಾಡುತ್ತಿರುತ್ತಾನೆ. ರೈತನಿಗೂ ಲಾಭ ಮಾಡಿ, ಸರ್ಕಾರಕ್ಕೂ ತೆರಿಗೆ ಬರಬೇಕಾ ಆ ರೀತಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ನಾವು ಯೋಚನೆ ಮಾಡಬೇಕು. ಸರ್ಕಾರಕ್ಕೆ ಬರುವ ತೆರಿಗೆಯನ್ನು ಮಧ್ಯವರ್ತಿಗಳು ತಪ್ಪಿಸುತ್ತಿರುವುದನ್ನು ಈ ತಿದ್ದುಪಡಿ ತರುವುದ ರಿಂದ ಸುಧಾರಣೆಯಾಗುತ್ತದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಸರ್ಕಾರಕ್ಕೆ ಲಾಭ ವಾಗುವುದರ ಜೊತೆಗೆ ರೈತನಿಗೆ ಅನುಕೂಲವಾಗುವ ಹಾಗಿದ್ದರೆ ಈ ತಿದ್ದುಪಡಿ ವಿಧೇಯಕಕ್ಕೆ ನನ್ನ ಒಪ್ಪಿಗೆ ಇದೆ. ಹಾಗಿಲ್ಲದೇ ಬರೀ ವ್ಯಾಪಾರಸ್ಥರಿಗೆ ಮಾತ್ರ ಲಾಭವಾಗುವ ಹಾಗಿದ್ದರೆ ಈ ತಿದ್ದುಪಡಿ ಯನ್ನು ತರುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ವ್ಯಾಪಾರಸ್ಥರನ್ನು ಸರ್ಕಾರ ಹತೋಟಿ ಮಾಡಿದ್ದಿದ್ದರೆ ರೈತನು ಅವರ ಕೈಯಲ್ಲಿ ಸಿಕ್ಕಿ ಹಿಂಡಿನಂತೆಯೇ ಮುಂದೆಯೂ ತೊಂದರೆಪಡಬೇಕಾಗು ತ್ತದೆ. ನಾನು ಹೇಳಿರುವ ವಿಷಯಗಳನ್ನು ನಿಯಂತ್ರಣ ಮಾಡಿ ರೈತನಿಗೆ ಅನುಕೂಲವಾಗುವ ಹಾಗಿದ್ದರೆ ಈ ವಿಧೇಯಕಕ್ಕೆ ನನ್ನ ವಿಶೇಷ ಸ್ವಾಗತ ಇದೆ ಹಾಗೂ ನಿಮ್ಮ ಪ್ರಯತ್ನಕ್ಕೆ ನಮ್ಮ ಬೆಂಬಲ ಇದೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಹಕಾರ ಸಚಿವರು ರೈತರ ಹಿತಾಸಕ್ತಿಯನ್ನು ಕಾಪಾಡಲು ತಂದಿರತಕ್ಕಂಥ ಈ ತಿದ್ದುಪಡಿಗಳನ್ನು ನಾನು ಮುಕ್ತವಾಗಿ ಸ್ವಾಗತ ಮಾಡುತ್ತಾ, ಬರೇ ಕಲಸುಮೇಲೋಗರಗಳನ್ನು ಮತ್ತೆ ಮತ್ತೆ ಮಾಡಿ, ವಿಧಾನಸೌಧ ದಲ್ಲಿರತಕ್ಕಂಥ ಆಫೀಸ್‌ಗಳಲ್ಲಿ ತುಂಬುತ್ತಾ ಇದ್ದಾರೆಯೇ ಹೊರತು ಅವುಗಳನ್ನು ಜಾರಿಗೆ ತಂದಿಲ್ಲ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂದು ಹೇಳುತ್ತಿದ್ದೇನೆ. ಹಿಂದೆ ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಗಳಾಗಿದ್ದಾಗ ಒಂದು ಕಾನೂನನ್ನು ತಂದರು. ಅದರಲ್ಲಿ ಅವರು ರೈತರಿಂದ ಈ ಸೆಸ್ ವಸೂಲಿ ಮಾಡುವುದಿಲ್ಲ ಪರ್‌ಚೇಸರ್ಸ್ ಕಡೆಯಿಂದ ವಸೂಲು ಮಾಡುತ್ತೇವೆ ಎಂದು ಹೇಳಿದರು. ಆದನ್ನು ಜಾರಿಗೆ ತಂದಿದ್ದೀರಾ? ಜಾರಿಗೆ ತಂದಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ಇದು ತನಕ ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ? ಈಗ ಎರಡೂ ಕಡೆಗಳಿಂದ ಇದನ್ನು ವಸೂಲು ಮಾಡುತ್ತಾ ಇದ್ದಾರೆ. ರೈತರಿಂದ ಪರ್‌ಚೇಸರ್ಸ್ ಏನು ತೆಗೆದು ಕೊಳ್ಳುತ್ತಿದ್ದಾರೆ ಅದನ್ನು ಅಕೌಂಟ್ ಕೊಡುವುದಿಲ್ಲ. ಹಿಂಗೆಲ್ಲಾ ನಡೆಯುತ್ತಿದ್ದು, ಇದು ಅಕ್ಯುಮುಲೇಟ್ ಆಗುತ್ತಾ ಇದೆ. ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್, ಮಾರ್ಕೆಟ್ ಸೆಸ್, ಇತ್ಯಾದಿಗಳಲ್ಲಿ ಏಂಜೆನ್ಸಿ ಮಾಡುವುದಕ್ಕೆ ಅನುಕೂಲವಾಗಿದ್ದು. ಯಾರು ಕಮಿಶನ್ ಏಜೆಂಟ್ಸ್ ಇದ್ದಾರೆ ಅವರಿಗೆ ಕಳ್ಳ ಹಣ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಈ ಬಿಲ್‌ಗೆ ಹಿಂದೆ ಸದನದ ಎರಡೂ ಪಕ್ಷದವರು ಒಕ್ಕೊರಲಿನಿಂದ ಸ್ವಾಗತಿಸಿ, ಪಾಸ್ ಮಾಡಿದ್ದಾರೆ. ಆದರೆ ಇದು ವರೆಗೂ ಇದರ ಬಗ್ಗೆ ಒಂದು ಕೇಸ್ ಕೂಡ ಹಾಕಿಲ್ಲ ಎಂದು ಕಾಣುತ್ತದೆ. ಆದ್ದರಿಂದ ರೈತರ ಕಷ್ಟ ಬಲ್ಲ ಮಾನ್ಯ ಮಲ್ಲಪ್ಪನವರು ಪ್ರಥಮವಾಗಿ ಈ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುತ್ತಿದ್ದಾರೆ. ಅದರಲ್ಲಿ ನನಗೆ ಸಂಶಯ ಏನೆಂದರೆ ಇವರು ಮಾಡಿದ ತಿದ್ದುಪಡಿಯನ್ನು ಜಾರಿಗೆ ತರುತ್ತಾರೆ ಅಥವಾ ಇಲ್ಲವೇ ಎಂದು. ಸೆಕ್ಷನ್ ೧೫ರಲ್ಲಿ If he thinks ಎನ್ನುವ ಪದಗಳನ್ನು ತೆಗೆದುಹಾಕಿ ಸೋ ಮೋಟೋ ಎಂಬ ಪದವನ್ನು ಹಾಕುವುದಕ್ಕೆ ಅವಕಾಶವನ್ನು ಮಾಡಿದ್ದೀರಿ. ಇದು ಸರಿಯಾದುದಲ್ಲ. ಏಕೆಂದರೆ ಈ ವ್ಯವಸ್ಥೆಯೊಳಗೆ ಎರಡೂ ಕಡೆಯ ಪಕ್ಷದವರು ಮೆಂಬರ್ಸ್ ಇರುತ್ತಾರೆ. ಏನಾದರೂ ಮಿಸ್‌ಕಂಡಕ್ಟ್ ಮಾಡಿದರೆ ಬೇಕಾದವರನ್ನು ರಿಮೂವ್ ಮಾಡಬಹುದು. ನಾನು ಇಲ್ಲಿ ಸಜೆಸ್ಟ್ ಮಾಡುವುದು ಏನೆಂದರೆ After giving a notice to the person ಎನ್ನುವುದನ್ನು ಅಳವಡಿಸಬೇಕು. ಇಲ್ಲದಿದ್ದರೆ ಇಲ್ಲಿ ಮಿಸ್‌ಯೂಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಉಳಿಯುತ್ತದೆ. ಸೋ ಮೋಟೋ ಎಂದರೆ ಎಕ್ಸ್‌ಪ್ಲೇನ್ ಮಾಡುವುದಕ್ಕೆ ಅವಕಾಶ ಮಾಡಿಕೊಡದೇ ಆಕ್ಷನ್ ತೆಗೆದು ಕೊಂಡ ಹಾಗೆ ಆಗುತ್ತದೆ. ತಮಗೆ ಬೇಡವಾದವರನ್ನು ಯಾರನ್ನಾದರೂ ತೆಗೆದು ಹಾಕುವುದಕ್ಕೆ ಪವರ್ಸ್‌ನ್ನು ಸಮಿತಿಗೆ ನೀವು ಕೊಡುತ್ತಾ ಇದ್ದ ಹಾಗೆ ಆಗುತ್ತದೆ. ಆದುದರಿಂದ ಇದು ಕೆಲವರಿಗೆ ಅನ್ಯಾಯವಾಗಬಹುದು. ದಯವಿಟ್ಟು ಈ ಸೋ ಮೋಟೋ ಎಂಬ ಪದವನ್ನು ತೆಗೆದು ಹಾಕಬೇಕು. ಹಾಗೆ ಮಾಡದಿದ್ದರೆ ಇದು ಕಾನೂನಿಗೆ ವಿರುದ್ಧವಾಗುತ್ತದೆ, ನ್ಯಾಚುರಲ್ ಜಸ್ಟೀಸ್‌ಗೆ ವಿರುದ್ಧವಾಗುತ್ತದೆ. ಇದರಲ್ಲಿ ಯಾರನ್ನು ನೀವು ತಪ್ಪಿತಸ್ಥನೆಂದು ಪರಿಗಣಿಸುತ್ತೀರೋ ಅವರಿಗೆ ಅಪರ್ಚುನಿಟಿ ಕೊಡದೇ ಹೋದರೆ, ಇದು ಸರಿಯಾಗುವುದಿಲ್ಲ. ಆದಕ್ಕಾಗಿ ಈ ಪದದ ಬಗ್ಗೆ ತಾವುಗಳು ಯೋಚನೆ ಮಾಡಿ, after giving a notice to the person ಎಂಬ ಶಬ್ದಗಳನ್ನು ಇಲ್ಲಿ ಹಾಕ ಬೇಕೆಂದು, ಈ ಶಬ್ದಗಳನ್ನು ಅಳವಡಿಸುವುದರ ಮೂಲಕ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಎಂ. ಎಸ್. ಪಾಟೀಲ್ (ಸಂಕೇಶ್ವರ).—ಅಧ್ಯಕ್ಷರೇ. ಮಾನ್ಯ ಸಹಕಾರ ಸಚಿವರು ಈ ತಿದ್ದುಪಡಿಗೆ ನಾನು ಸ್ವಾಗತ ಬಯಸುತ್ತೇನೆ. ನಾವುಗಳು ಮೊದಲಿಂದಲೂ ನಮ್ಮ ರೈತ ಸಮಾಜದವರ ಬಗ್ಗೆ ಬಂದ ಎಲ್ಲಾ ಅಮೆಂಡ್‌ಮೆಂಟ್‌ಗಳನ್ನು ಇಲ್ಲಿ ಪಾಸ್ ಮಾಡುತ್ತಾ ಬಂದಿದ್ದೇವೆ ಮತ್ತು, ಸಮಾಜದವರ ಹಿತಾಸಕ್ತಿಗೆ ಅನುಕೂಲವಾಗುವಂತಹ ಕಾಯಿದೆ ಕಾನೂನುಗಳನ್ನು ಮಾಡುತ್ತಾ ಬಂದಿದ್ದೇವೆ. ಮಾರ್ಕೆಟಿಂಗ್ ಸಮಿತಿಗೆ ಅಧ್ಯಕ್ಷನಾಗಿ, ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿಯ ಮೆಂಬರ್ ಆಗಿ ಕೆಲಸ ಮಾಡುವ ಕಾಲಕ್ಕೆ ನಾವು ಈ ಬಗ್ಗೆ ಒಂದು ಸಮಗ್ರ ಕಾನೂನು ಆಗಬೇಕೆಂದು ಅಂದಿನಿಂದಲೂ ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದೇವೆ. ಈಗ ಮಾನ್ಯ ಸಚಿವರು ತಂದಂತಹ ಈ ತಿದ್ದುಪಡಿಯನ್ನ ನೋಡಿದಾಗ ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಖರೀದಿ ಮಾಡತಕ್ಕಂಥ ಅವಕಾಶ ಇರಬೇಕು, ಸಹಕಾರ ಸಂಸ್ಥೆಗಳು ಹೆಚ್ಚಾಗಿ ಬೆಳೆಯಬೇಕು ಎಂಬ ಉದ್ದೇಶ ಇದರಲ್ಲಿ ಇಟ್ಟುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಂದ ಖರೀದಿ ಮಾಡಿದರೆ ಬರುವಂಥ ಸೆಸ್‌ನಿಂದ ಆಗಲೀ, ಕಮಿಷನ್‌ನಿಂದಾಗಲೀ ನಮ್ಮ ರೈತರಿಗೆ ಅನುಕೂಲ ಸಿಗುತ್ತದೆಂದು ನಾವು ಭಾವನೆ ಮಾಡಿದ್ದೇವೆ. ಆದರೆ ಎಷ್ಟು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ರೈತರು ತಂದ ಮಾಲನ್ನು ವ್ಯವಹಾರದಲ್ಲಿ ರೂಢಿಗೆ ತರುವುದನ್ನು ಪ್ರಯತ್ನ ಮಾಡಿದ್ದೀರಿ? ಎಷ್ಟು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ರೈತರು ತಂದ ಮಾಲನ್ನು ಖರೀದಿ ಮಾಡಲಾಗಿದೆ? ರೈತರು ತಂದ ಮಾಲನ್ನು ಮಾರ್ಕೆಟ್ ಕಮಿಟಿಯಲ್ಲಿ ಎಷ್ಟು ಆಕರ್ಷಣೆ ಮಾಡಲಾಗಿದೆ ಎಂದು ಒಂದು ಸಂಶಯವನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ವ್ಯಕ್ತಪಡಿಸುತ್ತೇನೆ. ಇಡೀ ನಮ್ಮ ಕರ್ನಾಟಕದಲ್ಲಿ ಎಷ್ಟು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಇವತ್ತಿನ ದಿವಸ ಕೆಲಸ ಮಾಡತಕ್ಕಂಥ ಸ್ಥಿತಿಯಲ್ಲಿವೆ? ಏನೋ ಇವರು ಒಂದು ಹಣ್ಣು ಧಾನ್ಯ ಮತ್ತು ಗೊಬ್ಬರವನ್ನು ವಿತರಣೆ ಮಾಡುವುದರಿಂದ ಕೆಲಸ ನಡೆಯುವುದೇ? ರೈತರ ಮಾಲನ್ನು ಖರೀದಿ ಮಾಡಿ, ರೈತರ ಮಾಲನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯು ವ್ಯಾಪ್ತಿಗೆ ತರಲು ಪ್ರಯತ್ನವನ್ನು ಮಾಡುತ್ತಿಲ್ಲ. ದಯಮಾಡಿ ಇದರ ಬಗ್ಗೆ ಗಮನ ಕೊಡಬೇಕು. ನಾನು ಮಹಾರಾಷ್ಟ್ರದ ಸಮೀಪದಲ್ಲಿರುವುದರಿಂದ ಅಲ್ಲಿರತಕ್ಕಂಥ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಾಗಲೀ, ತಾಲ್ಲೂಕು ಖರೀದಿ ಸಂಘಗಳಾಗಲೀ ಇಷ್ಟೊಂದು ವಿಶಿಷ್ಟವಾದಂಥ ಒಂದು ರೂಪ ತಾಳಿದೆ ಎಂದು ಹೇಳಿದರೆ ಇಡೀ ರಾಜ್ಯಾದ್ಯಂತ ಇವತ್ತು ಬೇರೆ ವ್ಯಾಪಾರಸ್ಥರು ಖರೀದಿ ಮಾಡುವುದನ್ನು ನಿಲ್ಲಿಸಿದರೂ ಕೂಡಾ ಆ ಖರೀದಿ ಮಾರ್ಕೆಟಿಂಗ್ ಸೊಸೈಟಿಗಳು ಎಂಟ್ಯೈರ್ ಹಳ್ಳಿಗಳಲ್ಲಿರತಕ್ಕಂಥ ಮಾಲನ್ನು ಖರೀದಿ ಮಾಡತಕ್ಕಂಥ ಎಲ್ಲಾ ಕೆಲಸ ಮಾಡುತ್ತಿವೆ. ಅದಕ್ಕಾಗಿ ಒಂದು ಅಮೆಂಡ್‌ಮೆಂಟ್‌ನ್ನು ತರುತ್ತೀರೆಂದು ಇವತ್ತಿನ ದಿವಸ ಹೇಳಿದ್ದೀರಿ. ಕೋ-ಆಪರೇಟಿವ್ ಸೊಸೈಟಿ ಖರೀದಿ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತಿದ್ದೇವೆ. ರೂರಲ್ ಏರಿಯಾದಲ್ಲಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯವರು ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆದರೆ ರೂರಲ್ ಏರಿಯಾದಲ್ಲಿ ರೈತರು ತಮ್ಮ ಮಾಲನ್ನು ಲೋಕಲ್‌ನಲ್ಲಿ ಇರತಕ್ಕಂಥ ವ್ಯಾಪಾರಸ್ಥರಿಗೆ ಮಾರಬೇಕಾಗುತ್ತದೆ. ಅವರು ತಂದು ಮಾರ್ಕೆಟ್ ಯಾರ್ಡ್‌ನಲ್ಲಿ ಮಾರಲಿಕ್ಕೆ ಸಾಧ್ಯ ಇಲ್ಲ. ಆ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಈ ಹೊಸ ಅಮೆಂಡ್‌ಮೆಂಟ್ ಏನು ಮಾಡುತ್ತಿದ್ದೀರಿ, ಇದರಲ್ಲಿ ಎ.ಪಿ.ಎಂ.ಸಿ. ಯಿಂದ ರೈತರ ಮಾಲನ್ನು ಖರೀದಿ ಮಾಡತಕ್ಕಂಥ ಅವಕಾಶ ಬರಬೇಕು. ಆದ್ದರಿಂದ ಎ.ಪಿ.ಎಂ.ಸಿ.ಗೆ ಅಧಿಕಾರ ವನ್ನು ಒದಗಿಸಿಕೊಡಬೇಕು. ಅಲ್ಲಿ ಎ. ಪಿ. ಎಂ. ಸಿ. ಖರೀದಿ ಮಾಡತಕ್ಕಂಥ ಅವಕಾಶವನ್ನು ನೀವು ಒದಗಿಸದೇ ಹೋದರೆ ಈ ಕೆಲಸ ಸರಿಯಾಗಿ ನಡೆಯುವುದಿಲ್ಲ. ಆದ್ದರಿಂದ ಇದರ ಬಗ್ಗೆ ಕಾರ್ಯಾಚರಣೆ ಯನ್ನು ಮಾಡಬೇಕೆಂದು ಹೇಳುತ್ತೇನೆ. ಅವಿಶ್ವಾಸ ಠರಾವನ್ನು ತಂದಮೇಲೆ ಒಂದು ವರ್ಷ ಠರಾವು ತರಲಿಕ್ಕೆ ಸಾಧ್ಯ ಇಲ್ಲ ಎನ್ನತಕ್ಕಂಥ ಕಲಂನ್ನು ಹಾಕಲಿಕ್ಕೆ ಹೇಳುತ್ತಿದ್ದೀರಿ. ಡೈರೆಕ್ಟ್ ಆಗಿ ಯಾರಾದರೂ ಒಂದು ಠರಾವನ್ನು ಮಾಡಿ ಒಬ್ಬರ ಸದಸ್ಯರ ಮೇಲೆ ತಂದರೆ ಅವಿಶ್ವಾಸ ಠರಾವನ್ನು ಯಾರ ಮೇಲೆ ವಿರುದ್ಧವಾಗಿ ಮತಗಳನ್ನು ಚಲಾಯಿಸಿರುತ್ತಾರೋ ಅವರನ್ನು ತೆಗೆದು ಹಾಕಲಿಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಇದು ಪ್ರಜಾಪ್ರಭುತ್ವದ ನೀತಿ ನಿಯಮಗಳಿಗೆ ಅನ್ವಯಿಸುವುದಿಲ್ಲ. ದಯಮಾಡಿ ಇದನ್ನು ಶಿದ್ಧುಪಡಿ ಮಾಡಬೇಕೆಂದು ಹೇಳುತ್ತೇನೆ. ಅವಿಶ್ವಾಸವನ್ನು ತಂದು ಮತ್ತೆ ಅವಿಶ್ವಾಸವನ್ನು ತರಲಿಕ್ಕೆ ಒಂದು ವರ್ಷದವರೆಗೆ ಅವಕಾಶ ಇಲ್ಲ. ಅವಿಶ್ವಾಸ ಠರಾವನ್ನು ತಂದು ಯಾರ ವಿರುದ್ಧ ಮತ ಹಾಕಿರುತ್ತಾರೋ ಅವರನ್ನು ನೇರವಾಗಿ ತೆಗೆಯಲಿಕ್ಕೆ ಅವಕಾಶ ಮಾಡಿಕೊಡು ತ್ತಿದ್ದೀರಿ. ಅದು ಎಷ್ಟರಮಟ್ಟಿಗೆ ಸಾಧು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಗಳಾಗಿದ್ದವರು. ಆಗ ಅವರು ರೈತರಿಂದ ಸೆಸ್‌ನ್ನು ನೇರ ವಾಗಿ ತೆಗೆದುಕೊಳ್ಳುವುದಿಲ್ಲ, ದಲ್ಲಾಳಿರವರಿಂದ ವಸೂಲು ಮಾಡುತ್ತೆ ವೆ ಎಂದ. ಹೇಳಿದ್ದರು. ಆಗ ಮನಸ್ಸಿಗೆ ಬಹಳ ಸಂತೋಷವಾಯಿತು. ರೈತರು ನಿಮ್ಮ ಪರವಾಗಿ ಮತ ಚಲಾಯಿಸಿದರು. ಅದನ್ನು ಎಷ್ಟರಮಟ್ಟಿಗೆ ಮಾಡಲಿಕ್ಕೆ ಸಾಧ್ಯವಾಯಿತು ಎನ್ನುವುದನ್ನು ನೋ ಡಬೇಕಾಗುತ್ತದೆ. ಎಲ್ಲಾ ಮಾರ್ಕೆಟ್‌ಯಾರ್ಡ್‌ನಲ್ಲಿ ದಲ್ಲಾಳಿರವರಿಂದ ಎರಡು ರೂಪಾಯಿ ಸೆಸ್ ಪಡೆಯುತ್ತಿದ್ದಾರೆ. ರೈತರಿಂದ ಳ ರೂಪಾಯಿ ಸೆಸ್‌ನ್ನು ಪಡೆಯುತ್ತಿದ್ದಾರೆ. ಆದರೆ ರೈತರು ಯಾರೂ ತಮ್ಮ ಕಡೆಗೆ ಬರುತ್ತಿಲ್ಲ. ಇದರ ಬಗ್ಗೆ ಯಾವ ರೈತರು ತಮಗೆ ದೂರನ್ನು ಕೊಡುತ್ತಿಲ್ಲ. ದಿನನಿತ್ಯದ ವ್ಯವಹಾರದಲ್ಲಿ ಇರುವುದರಿಂದ ಅವರನ್ನು ಎದುರು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ತರಹ ಯೋಜನೆ ಮಾಡುವುದಕ್ಕಿಂತ, ನೇರವಾಗಿ ರೆಗ್ಯುಲೇಟೆಡ್ ಆಗ್ರಿಕಲ್ಚರಲ್ ಮಾರ್ಕೆಟಿಂಗ್ ಬ್ಯಾಂಕ್ ಎಂದು ಮಾಡಿ, ಎಂಟ್ಯೈರ್ ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್‌ನ್ನು ನೀವು ಬ್ಯಾಂಕಿಂಗ್ ಸಿಸ್ಟಂನ್ನು ಆಳವಡಿಸಿದರೆ ಅನುಕೂಲವಾಗುತ್ತದೆ ಈ ತರಹ ವ್ಯವಸ್ಥೆ ಆಗದೆಹೋದರೆ ಯಾವ ವ್ಯಾಪಾರಸ್ಥರು ಖರೀದಿ ಮಾಡಿರುತ್ತಾರೆ ಯಾವ ರೈತ ಮಾರ್ಕೆಟ್‌ಯಾರ್ಡ್‌ನಲ್ಲಿ ಮಾಲನ್ನು ಮಾರಿರುತ್ತಾನೆ ಅವನಿಗೆ ನೇರವಾಗಿ ಅವನಿಗೆ ಚೆಕ್ ಮುಖಾಂತರ ಹಣ ಸಂದಾಯ ಮಾಡತಕ್ಕಂಥದ್ದು ಒಳ್ಳೆಯದು. ಇಲ್ಲವೇ ಹೋದರೆ ದಲ್ಲಾಳಿಗಳು ಎರಡು ರೂಪಾಯಿ ತೆಗೆದುಕೊಳ್ಳುತ್ತಾರೆ. ದಲ್ಲಾಳಿಗಳು ಸೆಸ್ ಕೊಡುತ್ತಿದ್ದಾರೆ ಎನ್ನತಕ್ಕಂಥ ಏನು ಒಂದು ತಿದ್ದುಪಡಿಯನ್ನು ತಂದಿದ್ದೀರಿ ಅದರಿಂದ ರೈತರಿಗೆ ಅನುಕೂಲವಾಗು ವುದಿಲ್ಲ. ಇದರ ಬಗ್ಗೆ ನಾನು ಕಿರಿಯ ಸೂಚನೆಯನ್ನೂ ಕೂಡಾ ಕೊಟ್ಟಿದ್ದೇನೆ. ಮಾನ್ಯ ಜಾಲಪ್ಪ ನವರಿಗೆ ಇದರಲ್ಲಿ ಚೆನ್ನಾಗಿ ಅನುಭವ ಇದೆ. ಇದನ್ನು ಹೇಗೆ ನಡೆಸಿದರೂ ಗದಗ್ ಬಿಟ್ಟರೆ ಅದು ಬೇರೆ ಕಡೆ ಯಶಸ್ವಿಯಾಗಿಲ್ಲ. ವಾಹನಗಳು ರೈತರ ಮಾಲನ್ನು ಮಾರ್ಕೆಟ್ ಕಮಿಟಿಗಳಿಗೆ ತರಬೇಕು. ಇದನ್ನು ಎಷ್ಟು ಮಾರ್ಕೆಟ್ ಕಮಿಟಿಗಳಲ್ಲಿ ವಾಹನಗಳ ವ್ಯವಸ್ಥೆಯನ್ನು ಮಾಡಿದ್ದೀರಿ? ಎಷ್ಟು

ಮಾರ್ಕೆಟ್ ಯಾರ್ಡ್‌ಗೆ ಈ ರೀತಿ ತರುತ್ತಿದ್ದಾರೆ ಎನ್ನತಕ್ಕಂಥ ವಿಷಯಗಳನ್ನು ನೀವೇ ಎಲ್ಲಾ ಯಾರ್ಡ್‌ಗೂ ಹೋಗಿ ನೋಡಬೇಕು. ನೀವು ಯಾವ ಉದ್ದೇಶವನ್ನಿಟ್ಟುಕೊಂಡು ಮಾಡಿರುತ್ತೀರಿ. ಆ ಉದ್ದೇಶ ಸಫಲವಾಗುವುದಿಲ್ಲ. ಮಂಗಳೂರು ಮಾರ್ಕೆಟ್ ಕಮಿಟಿಯವರು, ಗದಗ್ ಮಾರ್ಕೆಟ್ ಕಮಿಟಿಯವರು ನಾಲ್ಕು ಟ್ರಕ್ ತೆಗೆದುಕೊಳ್ಳುತ್ತಾರೆ ಹುಬ್ಬಳ್ಳಿ ಮಾರ್ಕೆಟ್ ಕಮಿಟಿಯವರು ನಾಲ್ಕು ಟ್ರಕ್ ತೆಗೆದುಕೊಳ್ಳುತ್ತಾರೆ. ಆದರೆ ಸಣ್ಣ ಸಣ್ಣ ಮಾರ್ಕೆಟ್ ಕಮಿಟಿಯವರು ಇದರ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿಲ್ಲ ಇವರು ರೈತರ ಪ್ರಶ್ನೆಗೊಳಗಾಗುತ್ತಾರೆ. ರೈತರಿಗೆ ತೂಕ ಸರಿಯಾಗಿ ಆಗಬೇಕು. ರೈತರಿಗೆ ಯೋಗ್ಯವಾದ ದರ ಸಿಗಬೇಕು. ನನ್ನ ತಿಳುವಳಿಕೆಯ ಪ್ರಕಾರ ಹೇಳುವುದಾದರೆ ಮಾರ್ಕೆಟ್‌ನಲ್ಲಿ ಸಂಬಳ ಗೊತ್ತುಮಾಡಿದ ಕೂಲಿಕಾರರು ಇರುವುದಿಲ್ಲ. ಯಾರು ಕಮಿಷನ್ ಕೊಡುತ್ತಾರೆ ಅವರಿಗೆ ಪೇಮೆಂಟ್ ಮಾಡುವ ಕಾಲಕ್ಕೆ ಅವನಿಗೆ ಚಾರ್ಜಸ್ ಸಿಕ್ಕದೇ ಹೋದರೆ ಸರಿಯಾಗಿ ತೂಕಮಾಡುವುದಿಲ್ಲ. ಆದುದರಿಂದಾಗಿ ರೈತರಿಗೆ ತೊಂದರೆಯಾಗುತ್ತದೆ. ಯಾರು ಕಮಿಷನ್ ಮೇಲೆ ಮಾಡುತ್ತಾನೆ ಅವನು ಸರಿಯಾಗಿ ಮಾಡುವುದಿಲ್ಲ. ಸ್ಯಾಲರೈಡ್ ವೇಮೆನ್ ಇಟ್ಟು ಸರಿಯಾದ ಪಂಚಿಂಗ್ ಸಿಸ್ಟಂ ಮಾಡಬೇಕು. ಈ ಕಾಯಿದೆಗೆ ಸಮಗ್ರವಾದಂತಹ ತಿದ್ದುಪಡಿ ತರತಕ್ಕಂತಹ ಕಾರ್ಯಕ್ರಮ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾಮಿನೇಷನ್ ಅನ್ನು ತಾವು ಮಾಡಿದ್ದೀರಿ, ಎಲ್ಲಾ ಭಾಗದ ಶಾಸಕರನ್ನು ಅಲ್ಲಿಗೆ ಹಾಕಿ ಇನ್ನೂ ನಾಲ್ಕೈದು ಜನ ಶಾಸಕರು ಹೆಚ್ಚಾದರೂ ಪರವಾಗಿಲ್ಲ ಆಳವಡಿಸಿಕೊಳ್ಳಬೇಕು. ಸಹಕಾರ ಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳು ಕೂಡ ಇದರಲ್ಲಿ ಬರಬೇಕಾಗುತ್ತದೆ. ಪ್ರತಿ ಸಲದ ಅಧಿವೇಶನದಲ್ಲಿ ತಿದ್ದುಪಡಿ ಮಾಡುತ್ತಾ ಹೋದರೆ ಇದು ಸರಿಯಾಗುವುದಿಲ್ಲ. ಇದಕ್ಕೆ ಸಮಗ್ರವಾದ ತಿದ್ದುಪಡಿ ಮಾಡಬೇಕು. ೧೮–೨೦ ವರ್ಷಗಳ ಹಿಂದೆ ಮಾಡಿದಂತಹ ತಿದ್ದುಪಡಿಗಳು ಇವೆ. ಈಗಾಗಲೇ ಏನು ತಿದ್ದುಪಡಿಯನ್ನು ತಂದಿದ್ದೀರಿ ಅದನ್ನು ಸ್ವಾಗತ ಮಾಡುತ್ತೇನೆ, ಸ್ವಾಗತ ಮಾಡಿದರೂ ಕೂಡ ಇದಕ್ಕೆ ಒಂದು ಸಮಗ್ರವಾದಂತಹ ತಿದ್ದುಪಡಿಯನ್ನು ತರಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ಮಾರ್ಕೆಟ್ ಯಾರ್ಡ್‌ಗಳನ್ನು ಮುನಿಸಿಪಾಲಿಟಿಗಳಿಗೆ ಕೊಡದೇ ತಾವೇ ಇಟ್ಟುಕೊಳ್ಳಿ ಅದನ್ನು ನಿಮ್ಮ ಆಸ್ತಿಯನ್ನಾಗಿ ಮಾಡಿಕೊಳ್ಳಿ. ಉದಾಹರಣೆಗೆ ಹೇಳುವುದಾದರೆ ಬೆಳಗಾಂ ಮಾರ್ಕೆಟ್ ಕಮಿಟಿ ಮುನಿಸಿಪಾಲಿಗಳಿಗೆ ಹಣ ಕೊಟ್ಟರು. ಆದರಲ್ಲಿ ಓವರ್‌ಹೆಡ್ ಟ್ಯಾಂಕ್‌ನಿಂದ ಮಾರ್ಕೆಟ್ ಯಾರ್ಡ್‌ಗೆ ಪೈಪ್‌ಲೈನ್ ಹಾಕಿದರೆ ಇದಕ್ಕೆಂದೇ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿದರು ಆದರೂ ಕೂಡ ಒಂದು ಹನಿ ನೀರು ಬರಲಿಲ್ಲ. ನೀವೇ ಮಾರ್ಕೆಟ್ ಯಾರ್ಡ್‌ನ ವ್ಯವಸ್ಥೆ ಮಾಡಿದರೆ, ಅದು ಬಿಲ್ಡಿಂಗ್ ಟ್ಯಾಕ್ಸ್ ಇರಲೀ ರೂಢ್ ಟ್ಯಾಕ್ಸ್ ಇರಲೀ, ಲೈಟ್ ಟ್ಯಾಕ್ಸ್ ಇರಲೀ ಅದನ್ನೆಲ್ಲಾ ನೀವೇ ಕಲೆಕ್ಟ್ ಮಾಡಿ ಒಂದು ಬಡಾವಣೆಯನ್ನು ಮಾಡಿ ಅದು ನಿಮ್ಮ ಕಂಟ್ರೋಲ್‌ನಲ್ಲಿರಬೇಕು ಎಂದು ಹೇಳುತ್ತಾ ಈ ತಿದ್ದುಪಡಿಯನ್ನು ತಾವು ಏನು ತುದಿದ್ದೀರಿ ಅದನ್ನು ಸ್ವಾಗತ ಮಾಡುತ್ತೇನೆ ಮತ್ತು ತಾವು ಎಲ್ಲಾ ಮಾರ್ಕೆಟ್ ಯಾರ್ಡ್‌ಗಳಿಗೂ ಭೇಟಿ ಕೊಡುವ ಒಂದು ಸದ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಹರಪ).—ಮಾನ್ಯ ಅಧ್ಯಕ್ಷರೇ, ಈ ಕಾಯಿದೆಗಳಿಗೆ ನಿಬಂಧನೆಗಳನ್ನು ಹಾಕಿದರೂ ಕೂಡ ಆ ನಿಬಂಧನೆಗಳಿಗೆ ಸರಿಯಾದಂತಹ ವಾತಾವರಣವನ್ನು ಸೃಷ್ಟಿ ಮಾಡಬೇಕು. ಈ ತಿದ್ದುಪಡಿಯನ್ನು ಏನು ತಂದಿದ್ದಾರೆ ಆ ತಿದ್ದುಪಡಿಯ ಚೌಕಟ್ಟಿನಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಅಂತಹ ವಾತಾವರಣವನ್ನು ಕಲ್ಪಿಸಿದ್ದಾರೆಯೇ ಎನ್ನತಕ್ಕಂತಹ ಪ್ರಶ್ನೆ ಈ ಸಂದರ್ಭದಲ್ಲಿ ಉದ್ಭವಿಸುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಏನಾಗಿದೆಯೆಂದರೆ ಮಾರ್ಕೆಟ್‌ಗಳನ್ನು ನಿರ್ಮಾಣ ಮಾಡಿ ಅಲಾಟ್ ಮಾಡಬೇಕಾದರೂ ಕೂಡ ಟ್ರೇಡರ್ಸ್‌ಗೆ ಕೊಡುವುದಿಲ್ಲ ಪ್ರೊಡ್ಯೂಸರ್ಸ್‌ಗೆ ಕೊಡುವುದಿಲ್ಲ ಕೇವಲ ಕಮಿಷನ್ ಏಜೆಂಟಗೆ ಮಾತ್ರ ಕೊಡುತ್ತಿದ್ದಾರೆ. ಟ್ರೇಡರ್ಸ್‌ಗಳಿಗೆ ಕೊಡುವುದಿಲ್ಲ ಅವರಿಗೆ ಕೊಟ್ಟರೂ ಕೂಡ ನಿಬಂಧನೆಗಳಿಗೆ ಒಳಪಟ್ಟು ಪ್ರೊಡ್ಯೂಸರ್ಸ್‌ಗಳಿಗೆ ಹೆಚ್ಚು ಅನುಕೂಲವಾಗತಕ್ಕಂತಹ ಸಂದರ್ಭ ಇದರಲ್ಲಿ ಬರುತ್ತದೆ ಎಂಬ ಭಾವನೆಯನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುತ್ತೇನೆ. ಇವತ್ತು ರೈತರು ಏನು ಪ್ರೊಡ್ಯೂಸ್



ಮಾಡುತ್ತಿದ್ದಾರೆ, ಅದಕ್ಕೆ ಸರಿಯಾದ ಒಂದು ಮಾರ್ಕೆಟ್ ಅಥವಾ ಒಳ್ಳೆಯ ವಾತಾವರಣ, ಒಳ್ಳೆಯ ಫೆಸಿಲೀಟೇಸನ್ನು ನಾವು ಕೊಡಬೇಕು. ಅಗ್ರಿ ಕಲ್ಚರಲ್ ಪ್ರೊಡ್ಯೂಸರ್ಸ್‌ನಿಂದ ಳಳ ಪರ್‌ಸೆಂಟ್ ಆಷ್ಟು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೆವಿನ್ಯೂವನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದೇವೆ. ಅವರ ಮೇಲೆ ನಾವು ಡಿಪೆಂಡ್ ಆಗಿ ಅವರಿಗೆ ಬೆ ಕಾಗಿರತಕ್ಕಂಥ ಫೆಸಿಲಿಟೀಸನ್ನು ನಾವು ಕೊಡಬೇಕು. ಮತ್ತು ನಮ್ಮಲ್ಲಿ ಎಷ್ಟೋ ಹಳ್ಳಿಗಳಲ್ಲಿ ರಸ್ತೆ ಚೆನ್ನಾಗಿರುವುದಿಲ್ಲ. ಆ ಹಳ್ಳಿಯಿಂದ ಏನಾದರೂ ಸಾಮಾನುಗಳನ್ನು ಮಾರ್ಕೆಟ್‌ಗೆ ತರಬೆ ಕಾದರೆ ಸಾಮಾನ್ಯವಾಗಿ ಮಾರ್ಕೆಟ್‌ಗಳು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿರುವುದರಿಂದ ತಾಲ್ಲೂಕು ಹೆಡ್ ಕ್ವಾರ್ಟರ್‌ಗೆ ಬರಬೇಕಾದರೆ ೪೦-೫೦ ಕಿಲೋ ಮೀಟರ್ ನಿಂದ ರೈತರು ಮಾರ್ಕೆಟ್‌ಗೆ ಬರಬೆ ಕಾದಂಥ ಪರಿಸ್ಥಿತಿ ಇದೆ. ಆದ್ದರಿಂದ ಮಾರ್ಕೆಟ್‌ಗಳನ್ನು ಸಬ್ ಮಾರ್ಕೆಟ್‌ಗಳಾಗಿ ವಿಂಗಡಿಸಿ ಒಂದೊಂದು ತಾಲ್ಲೂಕು ಮಂಡಳಿಯಲ್ಲಿ ಒಂದೊಂದು ಮಾರ್ಕೆಟನ್ನು ಮಾಡಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ ಎನ್ನುವಂಥ ಒಂದು ಅಭಿಪ್ರಾಯವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಮತ್ತು ಕೆಲವು ಹಳ್ಳಿಗಳಲ್ಲಿ ಸಂತೆಗಳು ನಡೆಯುತ್ತವೆ. ಮಂಡಳಿಯವರಿಗೆ ಹೆಚ್ಚು ಹಳ್ಳಿಗಳಲ್ಲಿ ಸಂತೆಗಳನ್ನು ನಡೆಸುವಂತೆ ಲೈಸೆನ್ಸ್‌ಗಳನ್ನು ಕೊಡಬೇಕು. ಮತ್ತೆ ರೈತರು ಆಗ್ರಿಕಲ್ಚರ್ ಪ್ರೊಡ್ಯೂಸಿಂಗ್‌ನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇರಿಗೇಷನ್ ಪ್ರಾಜೆಕ್ಟ್ ಮಾಡಿದಾಗ ಆ ಇರಿಗೇಷನ್ ಪ್ರಾಜೆಕ್ಟ್ ಚಾನಲ್ ಪಕ್ಕದಲ್ಲಿ ರೋಡ್‌ಗಳನ್ನು ಮಾಡುತ್ತಾರೆ. ರೋಡ್‌ಗಳನ್ನು ಕೂಡಾ ಗೌರ್ನಮೆಂಟ್ ಕಾಸ್ಟ್‌ನಲ್ಲಿ ಮಾಡುತ್ತಾರೆ, ಅದಕ್ಕಾಗಿ ಕಂದಾಯವನ್ನು ಟ್ಯಾಕ್ಸ್‌ರೂಪದಲ್ಲಿ ನಾವು ರೈತರಿಂದ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿಯಾಗಿ ಹಳ್ಳಿಗಳಲ್ಲಿ ರಸ್ತೆಗಳನ್ನು ಮಾರ್ಕೆಟ್ ಕಮಿಟಿಯವರು ಮಾಡಿ ಅವರಿಂದ ಟ್ಯಾಕ್ಸ್ ಮೂಲಕ ಅದರ ಖರ್ಚನ್ನು ವಸೂಲು ಮಾಡಿಕೊಳ್ಳಬಹುದು. ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಈ ಆರ್. ಎಂ. ಪಿ. ಯಲ್ಲಿ ಏನಾಗಿದೆ ಎಂದು ಹೇಳಿದರೆ ಇಲ್ಲಿ ಪಾಲ್ಟಿಪ್ಲಿಸಿಟಿ ಜಾಸ್ತಿಯಾಗಿದೆ. ಟಿ. ಎ. ಪಿ. ಸಿ. ಎಂ. ಎಸ್. ಮತ್ತು ಪೈವೇಟ್ ಗಳಲ್ಲದ ಕೂಡಾ ಟ್ರಾನ್ಸ್ಯಾಕ್ಷನ್ ನಡೆಯುತ್ತಿದೆ. ಇವೊತ್ತು ಕಂಟ್ರ್ಯಾಕ್ಟರ್ ಮೂಲಕವೂ ಟ್ರಾನ್ಸಾಕ್ಷನ್ ನಡೆಯುತ್ತಿದೆ. ಇದನ್ನೆಲ್ಲಾ ನಾವು ಸಿಲ್ಲಿಸಿ ಈ ಡೈರೆಕ್ಟೊರೇಟ್ ಆಫ್ ಮಾರ್ಕೆಟಿಂಗ್ ಎಂದು ಒಂದು ಸಂಸ್ಥೆಯನ್ನು ನಾವು ಸ್ಥಾಪನೆ ಮಾಡಿದರೆ ಅದಕ್ಕೆ ವೇಟ್ಸ್ ಅಂಡ್ ಮೆಸರ್ಸ್‌ನ್ನು ಸೇರಿಸಿದರೆ ಇದರ ಒಂದು ಆಡಳಿತಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರಿಂದ ರೈತರಿಗೂ ಒಳ್ಳೆಯ ಅನುಕೂಲವಾಗುತ್ತದೆ ಎಂಬ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತ ಪಡಿಸುತ್ತೇನೆ. ಹಳ್ಳಿಗಳಿಂದ ಇವತ್ತು ಪೆರಿಷಬಲ್ ಗೂಡ್ಸ್‌ನ್ನು ಮಾರ್ಕೆಟ್‌ಗೆ ತರುವಷ್ಟರ ಹೊತ್ತಿಗೆ ಅದರ ಆಯುಷ್ಯ ಕಳೆದು ಹೊಗಿರುತ್ತದೆ. ಅದನ್ನು ಮಾರ್ಕೆಟ್‌ಗೆ ತಂದರೆ ಅದಕ್ಕೆ ಸ್ಟೋರೇಜ್ ಸೌಲಭ್ಯ ಇಲ್ಲ. ರೈತರಿಗೆ ಅದನ್ನು ಇಡಲಿಕ್ಕೆ ಸ್ಟೋರೇಜ್ ಅನುಕೂಲ ಕೂಡಾ ಇಲ್ಲ. ಆದ್ದರಿಂದ ಪೆರಿಷನಲ್ ಗೂಡ್ಸ್‌ನ್ನು ಇಟ್ಟುಕೊಳ್ಳುವ ಉದ್ದೇಶದಿಂದ ಹಳ್ಳಿಯ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು ಸ್ಟೋರೆಜ್ ಮಾಡಬೇಕು. ಈ ವ್ಯವಸ್ಥೆಯನ್ನು ನಾವು ಮಾಡದೇ ಹೋದರೆ ನಿಜವಾಗಿಯೂ ನಾವು ರೈತರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಆಗುವುದಿಲ್ಲ. ಈ ಮಾರ್ಕೆಟ್‌ನಲ್ಲಿ ಸಾಮಾನುಗಳ ಮೂಲಕ ನಾವು ಈ ಟ್ರಾನ್ಸ್‌ಕ್ಷಾನ್‌ನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಒಂದು ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಮಾಡುತ್ತಿದ್ದೇನೆ. ಏಕೆಂದರೆ ಅವರಿಗೆ ಪ್ರಾಪರ್ ಕ್ರೆಡಿಟ್ ಫೆಸಿಲಿಟಿಸ್ ಇಲ್ಲ. ಇವತ್ತು ಟ್ರೆಡರ್ಸ್‌ಗೂ ಕೂಡಾ ಬಹಳ ತೊಂದರೆ ಇದೆ. ಟ್ರೇಡರ್ಸ್ ಕೂಡಾ ಮನಿಲೆಂಡರ್ಸ್‌ರನರಿಂದ ಮಡ್ಡನ್ನು ತೆಗೆದುಕೊಂಡು ಬರುತ್ತಾರೆ. ಅವರಿಗೆ ಕಾಸ್ಟ್ ಆಫ್ ಇಂಟರೆಸ್ಟ್ ಜಾಸ್ತಿ ಇರುತ್ತದೆ. ಟ್ರೆಡರ್ಸ್ ಇಂಟರೆಸ್ಟ್, ಪ್ರಿನ್ಸಿಪಲ್ ಎಲ್ಲಾ ಇಟ್ಟುಕೊಂಡು ಎಲ್ಲಾ ಪ್ರೊಡ್ಯೂಸರ್ಸ್‌ಗಳ ಮೇಲೆ ಹಾಕುತ್ತಾನೆ. ಪ್ರೊಡ್ಯೂಸರ್ಸ್ ಇಲ್ಲಿ ಸಿಕ್ಕಿ ಬಿಳುತ್ತಾರೆ. ಆದ್ದರಿಂದ ಟ್ರೇಡರ್ಸ್‌ಗೆಸಹ ಒಂದು ಕ್ರೆಡಿಟ್ ಫೆಸಿಲಿಟೀಸನ್ನು ಒದಗಿಸಿಕೊಡಬೆಕು. ಅದೇ ರೀತಿ ಪ್ರೊಡ್ಯೂಸರ್ಸ್‌ಗೂ ಕೂಡಾ ಅವನು ತಂದ ಗೂಡ್ಸ್ ಏನು ಇದೆ, ಅದನ್ನು ಇಟ್ಟುಕೊಂಡು ಒಳ್ಳೆಯ ಬೆಲೆ ಸಿಕ್ಕಿದಾಗ ಮಾರುವಂತೆ ಅವನ ಮಾಲನ್ನು ಇಟ್ಟುಕೊಳ್ಳುವುದಕ್ಕೆ ಅವನಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು, ಮಾರ್ಟಗೇಜ್ ಗೂಡ್ಸ್‌ಗಳ ಮೇಲೆ ರೈತನಿಗೆ ಮೇಲೆ ಸ್ವಲ್ಪ ಅಡ್ವಾನ್ಸ್‌ನ್ನು ಕೊಡತಕ್ಕಂಥ ಅನುಕೂಲಗಳನ್ನು ಮಾಡಿಕೊಡಬೇಕು. ಇದನ್ನು ಆರ್. ಎಂ. ಸಿ. ಯ ಮೂಲಕ ಮಾಡುವುದು ಅಲ್ಲದೇ ಇದನ್ನು ಡಿ. ಎ. ಪಿ. ಸಿ. ಎಂ. ಎಸ್. ಮೂಲಕ ಮಾಡುವುದರಿಂದ ಅನುಕೂಲವಾಗುತ್ತದೆ. ಇವತ್ತು ಸಹಕಾರ ಇಲಾಖೆಯಲ್ಲಿ ಟಿ. ಎ. ಪಿ. ಸಿ. ಎಂ. ಎಸ್ ನಲ್ಲಿ ಸರಿಯಾದ ಮಾರ್ಗದಲ್ಲಿ ಇವತ್ತು ಕೆಲಸ ಮಾಡುತ್ತಿಲ್ಲ. ನಾವು ಏನು ಉದ್ದೇಶಕ್ಕಾಗಿ ಈ ಸಂಸ್ಥೆಗಳನ್ನು ನಾವು ಸ್ಥಾಪನೆ ಮಾಡಿದ್ದೇವೋ ಆ ಉದ್ದೇಶವ ಒಂದು ಗುರಿಯನ್ನು ಅವು ಮುಟ್ಟಿಲ್ಲ. ಹಲವಾರು ಕಾರಣಗಳಿಂದ ಅವು ಡಿಫಾಲ್ಟರ್ ಆಗಿವೆ, ಡಿಫಂಕ್ಟ್ ಆಗಿ ಈ ಸಂಸ್ಥೆಗಳು ಕೆಲಸ ಮಾಡದೆ ನಿಂತುಹೋಗಿದೆ. ಈ ಒಂದು ಸಂಸ್ಥೆಯನ್ನು ಯಶಸ್ವಿಯಾಗಿ ಇಪ್ರೂವ್ ಮಾಡಿದ್ದೇ ಆದರೆ ಪ್ರೊಡ್ಯೂಸರ್ಸ್ ಈ ಒಂದು ಸಂಸ್ಥೆಗಳಲ್ಲಿ ವ್ಯವಹರಿಸುವುದು ಮತ್ತು ಸೇಲ್ ಮಾಡತಕ್ಕಂಥ ಪ್ರೊಡ್ಯೂಸರ್ಸ್ ಆಗಲೀ ಆ ಸಂಸ್ಥೆಗಳಾಗಲೀ

ಒಂದು ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ. ಹಳ್ಳಿಯಲ್ಲಿ ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗಳು ಇವೆ. ಇವುಗಳಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ರೈತರಿಂದ ಈ ಗೂಡ್ಸ್‌ಗಳನ್ನು ಅಲ್ಲಿಯೇ ಇಟ್ಟು, ಅವರಿಗೆ ಸರಿಯಾದ ಮಾರ್ಕೆಟ್ ಬಂದ ಸಂದರ್ಭದಲ್ಲಿ ಮಾರ್ಕೆಟ್ ಮಾಡುವ ವ್ಯವಸ್ಥೆ ಮಾಡಿದರೆ ಬಹಳ ಉತ್ತಮವಾಗುತ್ತದೆ, ಮತ್ತು ತಾವು ಏನು ಅಲ್ಲಿ ಏನು ಪ್ರೊಡ್ಯೂಸ್ ಮಾಡುತ್ತೇವೆ ಸ್ವಲ್ಪ producers is also a consumer, ಎಂಬ ರೀತಿಯಲ್ಲಿ ಬರತಕ್ಕಂಥಹ ಪ್ರೊಡ್ಯೂಸ್ ಏನು ಇದೆ ಅಲ್ಲಿ consumer ಗೆ ವಿತರಣೆ ಮಾಡತಕ್ಕ ವ್ಯವಸ್ಥೆ ಮಾಡಿದರೆ ನಿಜವಾಗಿ ಈ consumers ಬಹಳ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಇವೊತ್ತು ಸನ್ಮಾನ್ಯ ಸಚಿವರು ತಂದಿರತಕ್ಕ ಈ ಶಿದ್ದಾವಡಿ ಮಸೂದೆ, ಇದು ಲಕ್ಷೋಪಲಕ್ಷ ರೈತರ ಒಂದು ಉತ್ಪಾದನೆ ಮಾಡತಕ್ಕಂತ ಸಂಬಂಧಪಟ್ಟ ವಿಷಯ. Marketing Committee ಇದೆ. ವ್ಯಾಪಾರಿಗಳು, ವರ್ತಕರು, ದಳ್ಳಾಳಿಗಳು ಇವರೆಲ್ಲರೂ ಈ ವ್ಯಾಪ್ತಿಯಲ್ಲಿ ಬರುತ್ತಾರೆ. ವರ್ತಕರಾಗಿ ಕೆಲಸ ಮಾಡಿದವರು ಯಾರು. ಯಾರು ರೈತರಿಗೆ ಹಳ್ಳಿಗಳಲ್ಲಿ ಸಾಲ ಕೊಟ್ಟು ವರ್ಷವಗೊನೆಯಲ್ಲಿ ಅವರ ಪಾಲನ್ನು ಖರೀದಿ ಮಾಡಿ, ಮತ್ತು ಖರೀದಿ ಮಾಡುವಾಗ ಕೊಟ್ಟಂಥ ಸಾಲಕ್ಕೆ ಬಡ್ಡಿ, ಖರೀದಿ ಮಾಡಿದಂಥ ಪಾಲಿಗೆ ಸೆಸನ್ನು, ಇದನ್ನು ಅಧಿಕೃತವಾಗಿ ರೈತರ ಮೇಲೆ ಹಾಕುವುದಕ್ಕೆ ಕಾನೂನು ಇಲ್ಲ. ಆದರೆ ಇದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿರುತ್ತದೆ? ಬಳ್ಳಾರಿ ಮಾರ್ಕೆಟ್‌ಗೆ ನಾನು ನನ್ನ ವೈಯಕ್ತಿಕ ಅನುಭವ ಹೇಳುವುದಾದರೆ ಎರಡು ಚೀಲ ಜೋಳ ಕಳಿಸಿದೆ, ಅವರ ಜೊತೆಗೆ ವರ್ತಕರಿಗೆ ಪತ್ರ ಬರೆದು ಕಳಿಸಿದೆ. ತಕ್ಷಣ ಇದನ್ನು ಬಿಲ್ ಮಾಡಿ ಕಳಿಸಿ ಎಂದು ಬರೆದೆ. ಅವರು ಏನು ಮಾಡಿದರು ಎಂದರೆ ಸೆಸ್ ಅನ್ನು ಲೆಕ್ಕಕ್ಕೆ ತೆಗೆದು ಕೊಂಡರು, ಆದರೆ ಬರೆಯಲಿಲ್ಲ. ಅದನ್ನು ಬಿಲ್‌ನ ಹಿಂದುಗಡೆ ಖರ್ಚು ಎಂದು ಬರೆದರು. ಇವೊತ್ತು ಅನಧಿಕೃತವಾಗಿ ರೈತರಿಂದ ದಳ್ಳಾಳಿಯನ್ನು ವಸೂಲುಮಾಡುತ್ತಿದ್ದಾರೆ ಇದು ಸರ್ಕಾರದ ಗಮನಕ್ಕೂ ಬಂದಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದುಕೇಳಿದರೆ ಇದರ ಬಗ್ಗೆ ಕ್ರಮ ತೆಗೆದುಕೊಂಡಿದೆ ಎಂದು ಮಾತ್ರ ಉತ್ತರ ಕೊಟ್ಟಿದ್ದಾರೆ. ಇದರ ಅರ್ಥ ಏನು ಅಂದರೆ ಕಾನೂನು ಇದೆ, ಕಾನೂನು ಇದ್ದಾಗ್ಯೂ ಕೂಡ ವರ್ತಕರು ರೈತರನ್ನು ಸತತವಾಗಿ ಶೋಷಣೆ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ನನಗೆ ಅನ್ನಿಸುವುದು ಏನೆಂದರೆ ಸರ್ಕಾರ ವರ್ತಕರ ಜೊತೆ ರಾಜಿ ಮಾಡಿಕೊಂಡಿರುವುದರಿಂದ ಈ ರೀತಿ ನಡೆಯುತ್ತಿದೆ, ಏನೋ ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇವರು ಹಿಂದು ಮುಂದು ನೋಡುತ್ತಿದ್ದಾರೆ ಏನೋ ಎಂದು. ರೈತರು ಉತ್ಪಾದನೆ ಮಾಡತಕ್ಕ ವಸ್ತುಗಳಿಗೆ ಮಾರ್ಕೆಟಿಂಗ್ ಸೊಸೈಟಿ ಮೂಲಕ ಸೇಲ್ಸ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್ ಮತ್ತು ಇತರ ಎಲ್ಲಾ ಸೆಸ್‌ಗಳನ್ನು ತಪ್ಪಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಆದೇಶ ಇದ್ದರೂ ಇದು ಆಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಕೂಡ ಆದಾಯ ಬರುತ್ತಿಲ್ಲ. ಹೊರಗಡೆ ಆಗತಕ್ಕ ಅನಧಿಕೃತ ವ್ಯವಹಾರಗಳನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು ಹಾಗೆಯೇ ರೈತರಿಗೆ ಆಗತಕ್ಕ ಅನಾನುಕೂಲಗಳನ್ನು ಸರ್ಕಾರ ಗಮನಿಸಬೇಕು. ನಾನು ಹಲವಾರು ಬಾರಿ ಈ ಬಗ್ಗೆ ಮಾತನಾಡಿದ್ದೇನೆ. ಮೆಕ್ಕೆ ಜೋಳ, ಹತ್ತಿ ಇತ್ಯಾದಿಗಳ ಕೆಲವು ಸೀಸನ್‌ನಲ್ಲಿ ಮಾತ್ರ ಬರುತ್ತವೆ. ಕೆಲವು ವರ್ತಕರು ಲೈಸೆನ್ಸನ್ನು ಇಟ್ಟಿರುವುದಿಲ್ಲ ಹಾಗೂ ಇನ್‌ಕಮ್ ಟ್ಯಾಕ್ಸನ್ನೂ ಕಟ್ಟಿರುವುದಿಲ್ಲ. ಅವರು ರೈತರಿಗೆ ಸಾಲ ಕೊಟ್ಟಿರುತ್ತಾರೆ, ಗೊಬ್ಬರ ಬೀಜ, ಕೂಡ ಕೊಟ್ಟಿರುತ್ತಾರೆ. ಈ ರೀತಿಯಾಗಿ ರೈತರಿಗೆ ಅವರ ಋಣ ಇರುತ್ತದೆ: ಅವರಿಗೆ ಲೈಸೆನ್ಸ್ ಕೂಡ ಇರುವುದಿಲ್ಲ. ಅವರು ಸರ್ಕಾರಕ್ಕೆ ತೆರಿಗೆಯನ್ನೂ ಸರಿಯಾಗಿ ಕೊಡುವುದಿಲ್ಲ. ಟಿ. ಬಿ. ಪಿ. ಸಿ. ಎಂ. ಎಸ್ ಡಿಫಂಕ್ಟ್ ಆಗಿರುವುದರಿಂದ ಸಹಕಾರಸಂಘಗಳು ಖರೀದಿ ಮಾಡತಕ್ಕಂತ ಚೈತನ್ಯವನ್ನು ಹೊಂದಿಲ್ಲದೇ ಇರುವುದರಿಂದ ಅನಿವಾರ್ಯವಾಗಿ ರೈತರು ಮತ್ತೆ ಈ ವರ್ತಕರ ಹತ್ತಿರವೇ ಹೋಗಬೇಕಾಗಿರುತ್ತದೆ. ರೈತರು ತಾವು ಬೆಳೆದ ಮಾಲನ್ನು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿಗಳಿಗೆ ಮಾರಾಟ ಮಾಡಬೇಕೆಂದು ನಿಯಮವಿದ್ದರೂ ಸಹ ಕೆಲವು ರೈತರು ಸಾರಿಗೆ ವೆಚ್ಚ ಉಳಿಯುತ್ತದೆಂಬ ಕಾರಣದಿಂದ ತಾವು ಬೆಳೆದ ಜಾಗದಲ್ಲಿಯೇ ವರ್ತಕರಿಗೆ ಪೂರಾಟ ಮಾಡಿಬಿಡುತ್ತಾರೆ. ಇದನ್ನು ತಪ್ಪಿಸಬೇಕಾದರೆ ರೈತರು ತಾವು ಬೆಳೆದ ಮಾಲನ್ನು ಎಲ್ಲಿ ಮಾರಾಟ ಮಾಡಲು ಬಯಸುತ್ತಾರೋ ಅಲ್ಲಿಗೆ ನಿಮ್ಮ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರು ಹೋಗಿ ಕೊಳ್ಳುವಂತಹ ವ್ಯವಸ್ಥೆಯನ್ನು ನೀವು ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಈ ನಿಮ್ಮ ವ್ಯವಸ್ಥೆಯನ್ನು ಲೈಸೆನ್ಸ್ ಇಲ್ಲದ ವರ್ತಕರು ದುರುಪಯೋಗಪಡಿಸಿಕೊಳ್ಳುತ್ತಾರೆ. ಆದ್ದರಿಂದ ರೈತರಿಗೆ ಅನುಕೂಲ ಮಾಡಿಕೊಡುವ ಜವಾಬ್ದಾರಿ ನಿಮ್ಮ ಮೇಲಿದೆ, ಈ ಹಿಂದೆ ಸಹಕಾರ ಇಲಾಖೆಯನ್ನು

ಒಬ್ಬರೇ ಮಂತ್ರಿಗಳು ನೋಡಿಕೊಳ್ಳುತ್ತಿದ್ದರು. ಆದರೆ ಈಗ ಮೂರು ಜನ ಮಂತ್ರಿಗಳಿದ್ದಾರೆ. ಈ ನಿಯಂತ್ರಿತ ಮಾರುಕಟ್ಟೆಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಒಬ್ಬರು ಮಂತ್ರಿಗಳಿರುವುದರಿಂದ ಅವರು ರಾಜ್ಯದಲ್ಲಿರುವುದರಿಂದ ಎಲ್ಲಾ ಮಾರ್ಕೆಟಿಂಗ್ ಕಮಿಟಿಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ಹೋಗಿ ನೋಡಬೇಕು. ನನಗೆ ತಿಳಿದ ಪ್ರಕಾರ ಕೆಲವು ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಗಳು ಮತ್ತು ಮಾರ್ಕೆಟಿಂಗ್ ಕಮಿಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಅವು ಸರಿಯಾಗಿ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು. ರೈತರು ಬೆಳೆದ ಎಲ್ಲಾ ಮಾಲನ್ನು ಈ ಮಾರ್ಕೆಟಿಂಗ್ ಕಮಿಟಿಗಳ ಮೂಲಕ ಕೊಳ್ಳುವಂತಹ ವ್ಯವಸ್ಥೆ ಆಗಬೇಕು. ಇದಕ್ಕೆ ಸಂಬಂಧಪಟ್ಟಂತೆ ನೀವು ಈ ಮನೆಯಲ್ಲಿ ಅನೇಕ ತಿದ್ದುಪಡಿಗಳನ್ನು ತಂದು ಪಾಸ್ ಮಾಡಿಬಿಟ್ಟರೆ ಎಲ್ಲವೂ ಸರಿಹೋಗುತ್ತದೆಂದು ನಾನು ತಿಳಿಯುವುದಿಲ್ಲ, ತಿದ್ದುಪಡಿಗಳು ಪಾಸದ ಮೇಲೆ, ಅದರ ಒಂದು ಕಾರ್ಯಾಚರಣೆ ಬಹಳ ಮುಖ್ಯ. ಆದ್ದರಿಂದ ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು. ರೈತರು ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತರಲು ಅವಶ್ಯಕವಾದಂಥ ಎಲ್ಲಾ ವ್ಯವಸ್ಥೆಯಗಳನ್ನು ಕಲ್ಪಿಸಿಕೊಡಬೇಕು

ಇನ್ನು ಇಲ್ಲಿ ಒಂದು ಸಾವಿರ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಬಗ್ಗೆ ಏನು ಹೇಳಿದ್ದೀರಿ, ಇದು ನನ್ನ ಅಭಿಪ್ರಾಯದಲ್ಲಿ ಬಹಳ ಕಡಿಮೆ ಎಂದು ಹೇಳಬಹುದು. ಏಕೆಂದರೆ ಕೆಲವು ವರ್ತಕರು ಲಕ್ಷಗಟ್ಟಲೆ ಮಾಲನ್ನು ಖರೀದಿ ಮಾಡುತ್ತಾರೆ. ಆದ್ದರಿಂದ ಇದನ್ನು ಹೆಚ್ಚು ಮಾಡುವುದು ಒಳ್ಳೆಯದು. ಕಳೆದ ಸಲ ನಮ್ಮ ಬಳ್ಳಾರಿಯಲ್ಲಿ ಹತ್ತಿಯನ್ನು ರೈತರು ಹೆಚ್ಚಾಗಿ ಬೆಳೆದರು. ಬೇರೆ ಕಡೆ ಕೂಡ ರೈತರು ಹೆಚ್ಚಿನ ಪ್ರಮಾಣದಲ್ಲಿ ಬೆಳೆದರು. ಆ ಸಂದರ್ಭದಲ್ಲಿ ಕೆಲವು ಕಮಿಷನ್ ಏಜೆಂಟರುಗಳು ಮತ್ತು ವರ್ತಕರು ಸೇರಿಕೊಂಡು ರೈತರಿಂದ ಹತ್ತಿಯನ್ನು ಖರೀದಿ ಮಾಡಿದರು, ಇವರ ಹತ್ತಿರ ಸರಿಯಾದ ಲೈಸನ್ಸ್ ಇತ್ತೋ ಅಥವಾ ಇಲ್ಲವೋ ಗೊತ್ತಿಲ್ಲ. ಇವರಿಂದ ರೈತರಿಗೆ ಒಂದು ವರ್ಷದ ನಂತರ ಹಣ ಬಂತು. ಒಂದು ವರ್ಷ ಹಣ ಕೊಡಲು ತಡ ಮಾಡಿದ್ದಕ್ಕೆ ಬಡ್ಡಿ ಕೊಡಲಿಲ್ಲ. ಹತ್ತಿಯ ಬೆಲೆ ಹೊರಗಡೆ ಕ್ವಿಂಟಾಲ್ ಒಂದಕ್ಕೆ ೯೦೦ ರೂಪಾಯಿಗಳ ದರವಿದ್ದರೂ ಸಹ ಈ ಕಮಿಷನ್ ಏಜೆಂಟರು ಮತ್ತು ವರ್ತಕರು ಸೇರಿಕೊಂಡು ೫೦೦ ರೂಪಾಯಿಗಳಿಂದ ಹಿಡಿದು ೫೫೦ ರೂಪಾಯಿಗಳ ದರದಲ್ಲಿ ಇದನ್ನು ಖರೀದಿ ಮಾಡಿದ್ದಾರೆ. ಇವರುಗಳ ಮಧ್ಯೆ ಒಂದು ರೀತಿಯ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಆದ್ದರಿಂದ ಇವರುಗಳು ಒಬ್ಬರಿಗೊಬ್ಬರು ಪೈಪೋಟಿ ಮಾಡಿಕೊಂಡು ದರ ಹೆಚ್ಚು ಮಾಡಲು ಹೋಗುವುದಿಲ್ಲ. ಇಂಥಾದ್ದನ್ನೆಲ್ಲಾ ತಪ್ಪಿಸಲು ಸರ್ಕಾರದವರು ಸೂಕ್ತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮುಖ್ಯವಾಗಿ ನಾನು ಮೊದಲೇ ಹೇಳಿದಂತೆ ರೈತರು ತಾವು ಬೆಳೆದಿದ್ದನ್ನು ತಮ್ಮ ಗ್ರಾಮದಲ್ಲಿಯೇ ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯವನ್ನು ನೀವು ಒದಗಿಸಿಕೊಡಬೇಕು. ರೈತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಡುವುದು ಮಾರ್ಕೆಟಿಂಗ್ ಕಮಿಟಿಯವರ ಕೆಲಸವಾದ ಕಾರಣ ಅವರು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ಈ ನಿಯಂತ್ರಿತ ಮಾರುಕಟ್ಟೆ ಸಚಿವರಾದಂಥ ಶ್ರೀ ಕೆ. ಬಿ. ಮಲ್ಲಪ್ಪನವರು ತಂದಿರುವಂತಹ ಈ ವಿಧೇಯಕ ಬಹಳ ಸ್ವಾಗರ್ತಾವಾಗಿದೆ. ಮಾನ್ಯ ಮಲ್ಲಪ್ಪನವರು ರೈತ ಮೂಲದಿಂದ ಬಂದಿದ್ದಾರೆ. ಈ ಕಾರಣದಿಂದ ಈ ವಿಧೇಯಕ ರೈತರ ಪರವಾಗಿದೆ ಮತ್ತು ರೈತರಿಗೆ ಅನುಕೂಲವಾಗುವ ಅನೇಕ ವಿಷಯಗಳು ಇದರಲ್ಲಿವೆ. ಈ ಕಾರಣದಿಂದ ನಾನು ರೈತರ ಪರವಾಗಿ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ, ಇವತ್ತಿನ ದಿವಸ ನಾವು ಒಂದು ಅಂಶವನ್ನು ಗಮನಿಸಬೇಕು. ಏನೆಂದರೆ, ರೈತರು ವರ್ಷದ ೧೨ ತಿಂಗಳುಗಳ ಕಾಲವೂ ಸಹ ಒಂದಲ್ಲ ಒಂದು ರೀತಿಯ ತೊಂದರೆಯನ್ನು ಅನುಭವಿಸುತ್ತಿರುತ್ತಾರೆ. ಈ ಕಾರಣದಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಸ್ಥಿತಿ ಯಾವ ರೀತಿ ಇದೆ ಎಂಬ ಬಗ್ಗೆ ಇಲ್ಲಿ ಇನ್ನಷ್ಟು ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಿಯಂತ್ರಿತ ಮಾರುಕಟ್ಟೆಗಳಲ್ಲಿ ರೈತರು ತಾವು ಬೆಳೆದಿದ್ದನ್ನು ತಂದು ಮಾರಾಟ ಮಾಡಿದರೆ ಅವರಿಗೆ ಒಳ್ಳೆಯ ಬೆಲೆ ಸಿಗುತ್ತದೆ, ಇದರ ಜೊತೆಗೆ ಇಲ್ಲಿ ತೂಕದಲ್ಲಿ ಮೋಸವಾಗುವುದಿಲ್ಲ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂಬುತಕ್ಕಂಥ ಮಾತುಗಳನ್ನು ಈ ಎ.ಪಿ.ಎಂ.ಸಿ. ಬಗ್ಗೆ ನಾವು ಕಳೆದ ಅನೇಕ ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಆದರೆ ಏನಾಗಿದೆಯೆಂದರೆ, ದುರ್ದೈವದಿಂದ ಅಪತ್ಕಾಲದಲ್ಲಿ ಅಂದರೆ ಯಾವುದಾದರೂ ಲಾರಿ ಸ್ಟಾಟ್ಸ್ ಹೋದಾಗ ಅಂಥ ವಾಹನಗಳಿಗೆ ಲೈಫ್ ಇನ್ಸೂರೆನ್ಸ್ ಕಾರ್ಪೊರೇಷನ್ ಹಣ ಬರುತ್ತದೆ. ಅದೇ ರೀತಿ ಹಳ್ಳಿಯಲ್ಲಿರುವಂಥ ವ್ಯವಸಾಯ ಸೇವಾ ಸಹಕಾರ ಸಂಘಗಳು, ಗ್ರಾಮ ಸೇವಾ ಸಹಕಾರ ಸಂಘಗಳು ಮತ್ತು ತಾಲ್ಲೂಕು ಮಟ್ಟದಲ್ಲಿರುವಂಥ ಸಂಸ್ಥೆಗಳು ಮುಂದೆ ಬರಬೇಕು. ತಾವು ಹಿರೇಕೆರೂರ್ ಟಿಎಪಿಸಿಎಂಎಸ್ ನಲ್ಲಿ ೨-೩ ದಶಕಗಳ ಕಾಲ ಅಧ್ಯಕ್ಷರಾಗಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದೀರಿ ಎನ್ನುವುದು ನನಗೆ ಗೊತ್ತಿದೆ ನಾನು ವಿದ್ಯಾರ್ಥಿಯಾಗಿದ್ದಾಗ ಓದುತ್ತಿದ್ದೆ. ಆದರೆ ಇವತ್ತು ಏನಾಗಿದೆಯೆಂದರೆ, ಸ್ಥಾನಿಕವಾಗಿ ಸ್ಥಳೀಯವಾಗಿ ರೈತರ ನೆರವಿಗೆ ಬರಬೇಕಾದವರಿಗೆ ಶಕ್ತಿ ಇಲ್ಲ. ಹಳ್ಳಿಯಲ್ಲಿರುವಂಥ ವ್ಯವಸಾಯ ಸೇವಾ ಸಹಕಾರ ಸಂಘಗಳು ಆರ್ಥಿಕವಾಗಿ ತಮ್ಮ ಕಾಲ ಮೇಲೆ ಎದ್ದು ನಿಲ್ಲಲಿಕ್ಕೆ ಯಾವ ರೀತಿ ಪೋಷಣೆ ಮಾಡುತ್ತೀರಿ ? ರೈತರಿಗೆ ಲೈಸನ್ಸ್ ಇದೆಯೇ ಇಲ್ಲವೇ ಎನ್ನುವುದು ಮಾರುಕಟ್ಟೆಯ ಅಧಿಕಾರಿಗಳಿಗೆ ಗೊತ್ತಿಲ್ಲ. ಓರ್ವ ವ್ಯಾಪಾರಿ ಗೋಧಿ ತುಂಬುವಂಥ ಕೆಲಸ ಮಾಡುತ್ತಾನೆ. ಅಕ್ಕಿ ತುಂಬುವಂಥ ಕೆಲಸ ಮಾಡುತ್ತಾನೆ, ಕಡಲೆ ತುಂಬುವಂಥ ಕೆಲಸ ಮಾಡುತ್ತಾನೆ ಅವನಿಗೆ ಲೈಸನ್ಸ್ ಇದೆಯೋ ಇಲ್ಲವೋ ಎನ್ನುವಂಥ ಅಂಶವನ್ನು ಮಾರುಕಟ್ಟೆಯ ಅಧಿಕಾರಿಗಳು ಗಮನಿಸುವುದಿಲ್ಲ. ಅವನಿಗ ಅವರಿಗೂ ಒಂದು ತರಹದ ಒಪ್ಪಂದವಿರುತ್ತದೆ. ಹೀಗಾಗಿ ರೈತ ಅನಿವಾರ್ಯವಾಗಿ ಗ್ರಾಮಾಂತರದ ದಲ್ಲಾಳಿಗಳ ಮೊರೆ ಹೋಗುತ್ತಾನೆ. ಅವನಿಗೆ ಅಡಚಣೆ ಬಂದರೆ ೧೦-೧೫ ೨೫-೫೦ ರೂಪಾಯಿ ಕೊಡುವವನು ಅವನು. ಇದು ಎಷ್ಟು ಆಕರ್ಷಣೆ ಇರುತ್ತದೆ ಎಂದರೆ, ೫ ಅಥವಾ ೧೦ ಎಕರೆ ಭೂಮಿ ಇರತಕ್ಕಂಥ ರೈತ ಇರುತ್ತಾನೆ ಅವನ ತಲೆಯೊಳಗೆ ಯಾವಾಗಲೋ ಇದು ಬಂದು ಬಿಡುತ್ತದೆ. ನಾನೇಕೆ ಇಡೀ ವರ್ಷ ಬೇಸಾಯ ಮಾಡಿ ಮಾಡಿ, ವ್ಯವಸಾಯ ಮಾಡಿ ಮಾಡಿ ಸತ್ತು ಹೋಗಬೇಕು ಎಂದು ವಿಚಾರ ಮಾಡಿ ಜೇಬಿನೊಳಗೆ ೪೦೦-೫೦೦ ರೂಪಾಯಿ ಹಾಕಿಕೊಂಡು ತಕ್ಕಡಿ ತೆಗೆದುಕೊಂಡು ಬಂದು ಬಿಡುತ್ತಾನೆ ಬಹಳ ಅಂದರೆ ೧೦೦ ರೂಪಾಯಿ ತೆಗೆದುಕೊಂಡು ಕ್ಯಾಲುಕ್ಲೇಟರ್ ಕೂಡ ತೆಗೆದುಕೊಂಡು ಬಂದು ಬಿಡುತ್ತಾನೆ. ನಾಳೆ ಶೇಂಗಾ ಧಾರಣೆ ಏನು ನಾಳೆ ಜೋಳದ ಧಾರಣೆ ಏನು, ನಾಳೆ ಗೋಧಿ ಧಾರಣೆ ಏನು, ಆಹಾರ ಧಾನ್ಯಗಳ ಧಾರಣೆ ಏನು ಎನ್ನುವುದನ್ನು ತಿಳಿದುಕೊಂಡು, ಪೇಟೆಗಳ ವಿರಿಳಿತಗಳನ್ನು ತಿಳಿದುಕೊಂಡು ಈ ತೇಜಿಮಂದಿ ತಿಳಿದು ಹಳ್ಳಿಗಳಲ್ಲಿ ನುಸುಳುತ್ತಾನೆ. ಈ ರೀತಿ ನುಸುಳಿಕೊಂಡು ಕೈತನಿಗೆ ಏನಪ್ಪ ಏನೋ ಆಗುವ ಸಂಭವವಿದೆ. ಗೋಧಿ ಧಾರಣೆ ಇಳಿಯುವ ಸಂಭವವಿದೆ ನೋಡು ನಿನ್ನೆ ಸಂಯುಕ್ತ ಕರ್ನಾಟಕ ಪೇಪರಿನಲ್ಲಿ, ಪ್ರಜಾವಾಣಿ ಪೇಪರಿನಲ್ಲಿ ಓದಿದೆ ಎಂದು ಹೇಳುತ್ತಾನೆ ಇನ್ನು ೮ ದಿವಸದಲ್ಲಿ ಏಕ್‌ದಂ ಗೋಧಿ ಧಾರಣೆ ಕೆಳಗೆ ಬರುತ್ತದೆ ಎಂದು ಹೇಳುತ್ತಾನೆ. ರೈತನಿಗೆ ಮಾರ್ಕೆಟ್‌ಗೆ ಹೋಗುವಂಥ ಶಕ್ತಿ ಇರುವುದಿಲ್ಲ. ರೈತ ಸದಾಕಾಲ ಬೇಸಾಯದಲ್ಲಿ ನಿರತನಾಗಿರುತ್ತಾನೆ. ಹುಬ್ಬಳ್ಳಿ-ಧಾರವಾಡದಲ್ಲಿ, ಹಿರೇಕೆರೂರಿನಲ್ಲಿ ೪೦೦ ರೂಪಾಯಿ ಕ್ವಿಂಟಾಲ್‌ಗೆ ಧಾರಣೆ ಇರಬೇಕು, ನಾನು ನಿನ್ನ ಮನೆ ಬಾಗಿಲಿಗೆ ಬಂದಿದ್ದೇನೆ, ೧೦ ರೂಪಾಯಿ ಕಡಿಮೆ ತೆಗೆದುಕೋ, ನಿನಗೆ ಹೋಗಿ ಬರುವ ಗಾಡಿ ಖರ್ಚು ಉಳಿಯುತ್ತದೆ ಎಂದು ಹೇಳಿ ಅವನಿಗೆ ೧೦-೧೫ ರೂಪಾಯಿ ಅವನಿಗೆ ಹಜಾಮತಿ ಮಾಡುತ್ತಾನೆ. ಅವನು ನನ್ನ ಮನೆ ಬಾಗಿಲಿಗೆ ಬಂದಿದ್ದಾನೆ ೧೦-೧೫ ರೂಪಾಯಿ ಕಡಿಮೆಯಾದರೂ, ಹಾನಿಯಾದರೂ ಆಡ್ತಿಯಿಲ್ಲ ಎಂದು ಅವನು ಹೇಳಿದಂಥ ಬಣ್ಣದ ಮಾತಿಗೆ ಒಳಗಾಗಿ ಅವನು ಹೇಳಿದ ಧಾರಣೆಗೆ ಸ್ಥಳೀಯವಾಗಿ ತನ್ನ ಉತ್ಪಾದನೆಗಳನ್ನು ವಹಿವಾಟು ಕೊಳ್ಳುತ್ತಾನೆ. ಮಾನ್ಯ ಕೆ. ಹೆಚ್. ಶ್ರೀನಿವಾಸರವರು ಒಂದು ಮಾತನ್ನು ಹೇಳಿದರು. ಇಂತಹ ಅವ್ಯವಹಾರಗಳಲ್ಲಿ ರೈತರನ್ನೂ ಕೂಡ ಹೊಣೆಗಾರರನ್ನಾಗಿ ಮಾಡಬೇಕು ಎಂದು. ಅದು ಏಕೋ ನನಗೆ ಸರಿ ಕಾಣಲಿಲ್ಲ. ಏಕೆಂದರೆ, ಯಾವತ್ತೂ ರೈತ ಅಡಚಣೆ ಪ್ರಾಣಿ. ಅದು ಅವನ ಆ ಜನ್ಮ ಸಿದ್ಧ ಹಕ್ಕು. ಅಡಚಣೆಯನ್ನು ಬೆನ್ನಿಗೆ ಕಟ್ಟಿಕೊಂಡು ಬಂದಿರುವುದು ರೈತ ಆದುದರಿಂದ ದಲ್ಲಾಳಿಗಳ ಮೇಲೆ ನಿರ್ಲಕ್ಷ್ಯ, ಕರ್ತವ್ಯಚ್ಯುತಿ ಮಾಡುವಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಮುಗ್ಧನಾದಂಥ, ಏನೋ ಗೊತ್ತಿರಲಾರದಂಥ, ಹೊರ ಜಗತ್ತಿನ ವ್ಯವಹಾರ ಗೊತ್ತಿರಲಾರದಂಥ ರೈತರ ಮೇಲೆ ಕ್ರಮ ತೆಗೆದುಕೊಳ್ಳುವುದು ಅವಾಸ್ತವವಾದೀತು. ಕೊನೆಯದಾಗಿ ಏನು ಹೇಳುತ್ತಿದ್ದೇನೆಂದರೆ, ಇದೆಲ್ಲದಕ್ಕೂ ಮೂಲ ಕಾರಣ ಅಂದರೆ ಮಾರುಕಟ್ಟೆ ವ್ಯವಸ್ಥೆ ಹಿಂದೆ ಮಾನ್ಯ ಜೀವಪ್ಪನವರು ಆ ಮಾತನ್ನು ಹೇಳಿದ್ದರು, ಇವತ್ತು ಮಾನ್ಯ ಏಕಾಂತಯ್ಯನವರು ಹೇಳಿದ್ದಾರೆ. ಮಾನ್ಯ ಏಕಾಂತಯ್ಯನವರು ೧೫ ದಿವಸಗಳ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಾವಿರಾರು ಸೊಸೈಟಿಗಳು ದಿವಾಳಿ ಎದ್ದಿವೆ, ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಬ್ರಹ್ಮಾಸ್ತ್ರ ಎತ್ತುತ್ತೇನೆ ಎಂದು, ಅವುಗಳಿಗೆ ಕಾಯಕಲ್ಪ ಬರುವಂಥ ಕೆಲಸ ಮಾಡುತ್ತೇನೆ ಎಂದರೆ ಅಶಕ್ತ ಸೊಸೈಟಿಗಳನ್ನು ಸಶಕ್ತ ಸೊಸೈಟಿಗಳಿಗೆ ಮರ್ಜ್ ಮಾಡುವುದು. ಏಕಾಂತಯ್ಯನವರೂ ಅದನ್ನೇ ಮಾಡುತ್ತಾರೆ. ಇದಕ್ಕಿಂತ ಜಾಸ್ತಿ ಅವರಿಂದ ನಿರೀಕ್ಷಣೆ ಮಾಡಲಿಕ್ಕೆ ಆಗುವುದಿಲ್ಲ. ನಿಮಗೆ

ಗೊತ್ತಿದೆ, ನಮ್ಮ ಊರಿನ ಸೊಸೈಟಿ ಅಶಕ್ತ ಇದೆ ಅಂದರೆ, ಜಮಖಂಡಿ ಸೊಸೈಟಿ ಅಶಕ್ತ ಇತ್ತು ಎಂದರೆ ಹಿರೇಕೆರೂರು ಸೊಸೈಟಿ ಸಶಕ್ತ ಇತ್ತು ಅಂದರೆ ಅದರೊಳಗೆ ಇದನ್ನು ಕೂಡಿಸುವುದು ಅಷ್ಟೆ. ಇದಕ್ಕಿಂತ ಜಾಸ್ತಿ ಏನೂ ಮಾಡುವುದಕ್ಕಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸೊಸೈಟಿಗಳನ್ನು ಬೆಳೆಸಬೇಕು. ನಾನು ಕೆ. ಬಿ. ಮಲ್ಲಪ್ಪನವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಮಾರ್ಕೆಟ್‌ಯಾರ್ಡುಗಳು ಅರಕಲಗೂಡು, ಚನ್ನರಾಯಪಟ್ಟಣ ಅರಸೀಕೆರೆಗಳಲ್ಲಿ ಇವೆ ಸಾಲದು. ಗ್ರಾಮೀಣ ಪ್ರದೇಶಗಳಲ್ಲಿ ಮಾರ್ಕೆಟ್ ಯಾರ್ಡಗಳನ್ನು ಸ್ಥಾಪನೆ ಮಾಡುವುದಕ್ಕೆ ತಾವು ಕಾರ್ಯೋನ್ಮುಖರಾಗಬೇಕು. ಅವುಗಳು ಚೆನ್ನಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಜಮಖಂಡಿ ತಾಲ್ಲೂಕಿನಲ್ಲಿ ೧೦,೦೦೦ ಜನಸಂಖ್ಯೆ ಇರುವಂಥ ಹತ್ತು ಹಳ್ಳಿಗಳು ಇವೆ. ಬೀಳಗಿ ತಾಲ್ಲೂಕಿನಲ್ಲಿ ೧೦,೦೦೦ ಜನಸಂಖ್ಯೆ ಇರತಕ್ಕ ಒಂದೆರೆಡು ಹಳ್ಳಿಗಳು ಇವೆ. ಇವತ್ತು ಎಲ್ಲಾ ಊರುಗಳ ಜನರು ತಾವು ಬೆಳೆದಂಥ ಉತ್ಪನ್ನಗಳನ್ನು ತಾಲ್ಲೂಕು ಕೇಂದ್ರಗಳಿಗೆ ತರುವುದಕ್ಕೆ ಕಷ್ಟ ಇದೆ. ನಮ್ಮ ಭಾಗದಲ್ಲಿ ೫೦-೬೦ ಕಿಲೋಮೀಟರ್ ದೂರದವರೆಗೂ ಬರಬೇಕಾಗಿದೆ. ಹಳೇ ಮೈಸೂರು ಭಾಗದಲ್ಲಿ ಇವು ಸಮೀಪದಲ್ಲಿವೆ. ನಮ್ಮ ಹಿರಿಯೂರು ಜಮಖಂಡಿಗೆ ಹೋಗಬೇಕಾದರೆ ಮೂಲಿ ಹೇರಿಕೊಂಡು ಹೋಗಬೇಕೆಂದು ಹೇಳುತ್ತಿದ್ದರು. ನಾನು ಚಿಕ್ಕವನಾಗಿದ್ದಾಗ, ಮೂಲಿ ಎಂದರೆ ಮನೆಯ ಮೂಲಿ ಎಂದು ತಿಳಿದುಕೊಂಡಿದ್ದೆ. ಒಮ್ಮೆ ನಮ್ಮ ಅಪ್ಪನನ್ನು ಕೇಳಲಾಗಿ, ಮೂಲಿ ಅಂದರೆ ಮನೆ ಮೂಲಿಯಲ್ಲ, ಒಂದು ಚಕ್ಕಡಿಯೊಳಗೆ ಅದು ಹಿಡಿಯುವಷ್ಟು ಜೋಳ, ಗೋಧಿ ಹಾಕಿಕೊಂಡು ಹೋಗುವುದು, ***ನಿನಗೆ ಇದೆಲ್ಲಾ ಎಲ್ಲಿ ತಿಳಿಯುತ್ತದೆ ಎಂದು ಹೇಳಿದ್ದರು. ನಮ್ಮದೂ ಅಂದಿನ ಕಾಲಕ್ಕೆ ಒಂದು ಸಣ್ಣದು ಕಿರಾಣಿ ಅಂಗಡಿ ಇತ್ತು. ಇವತ್ತು ದೂರದಲ್ಲಿರತಕ್ಕ ರೈತರು ಧಾನ್ಯಗಳನ್ನು ತಾಲ್ಲೂಕು ಕೇಂದ್ರಕ್ಕೆ ತರಬೇಕೆಂದರೆ ಬಹಳ ಕಷ್ಟ ಇದೆ ಆದ್ದರಿಂದ ಗ್ರಾಮೀಣ ಪ್ರದೇಶದ ಮಾರುಕಟ್ಟೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಅಲ್ಲಿ ರೈತರಿಗೆ ಬೇಕಾದ ಎಲ್ಲ ರೀತಿಯ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಇವತ್ತು ಗದಗ್ ಮತ್ತು ಯಶವಂತಪುರಗಳಲ್ಲಿ ರೈತ ಭವನ ಎಂದು ದೊಡ್ಡದಾಗಿ ಬೋರ್ಡುಗಳನ್ನು ಹಾಕಿದ್ದೀರಿ. ಅಲ್ಲಿ ರೈತರಿಗೆ ಯಾವ ಸೌಕರ್ಯವೂ ಇಲ್ಲ. ಜಳಕ ಮಾಡುವುದಕ್ಕೆ ಅನುಕೂಲ ಇಲ್ಲ. ಓಬಿರಾಯನ ಕಾಲದ ಖಾದಿ ಬಟ್ಟೆ ಬೆಡ್‌ಷೀಟುಗಳು ಇವೆ. ಸರಿಯಾದ ವಸತಿ ಇಲ್ಲ. ಖಾಸಗೀ ಹೋಟೆಲುಗಳಿಗೆ ಹೋದರೆ, ಅತಿಥಿ ಗೃಹಗಳಿಗೆ ಹೋದರೆ ಜಳಕ ಮಾಡುವುದಕ್ಕೆ ಊಟ ತಿಂಡಿಗೆ ಅನುಕೂಲಗಳು ಇರುತ್ತವೆ. ಎ.ಪಿ.ಎಂ.ಸಿ. ಗೆಸ್ಟ್ ಹೌಸುಗಳಲ್ಲಿ ನನ್ನಂತ ಪುಡಾರಿಗಳು ಮಾತ್ರ ಉಳಿದುಕೊಳ್ಳುತ್ತಾರೆ. ಎ.ಪಿ.ಎಂ.ಸಿ. ಡೈರೆಕ್ಟರುಗಳಿಗೆ ಮಾತ್ರ ಆಲ್ಲಿ ಸೌಲಭ್ಯಗಳು ಇವೆ. ರೈತರಿಗೆ ಇಲ್ಲ. ಕಾಲಕ್ಕೆ ಸರಿಯಾಗಿ ರೈತರ ಪಾಲುಗಳನ್ನು ಕೊಂಡುಕೊಳ್ಳುವಂಥ ವ್ಯವಸ್ಥೆ ಮಾಡಬೇಕು. ರೈತನಿಗೆ ತನ್ನ ಪಾಲನ್ನು ಮಾರಾಟ ಮಾಡುವುದಕ್ಕೆ ಇಚ್ಛೆ ಇಲ್ಲದಿದ್ದರೆ. ಅವನಿಗೆ ಸೂಕ್ತ ಪ್ರಮಾಣದ ಮುಂಗಡ ಹಣವನ್ನು ಕೊಟ್ಟು ಸರಿಯಾದ ದರ ಸಿಕ್ಕಿದ ಮೇಲೆ ಮಾರಾಟ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಮಗೆಲ್ಲಾ ಗೊತ್ತಿರುವಂತೆ, ಮಾರುಕಟ್ಟೆಗಳಲ್ಲಿ ರೈತರು ತಂದಂಥ ದವಸ ಧಾನ್ಯಗಳ ಮೂಟೆಗಳಿಗೆ ಚಾಕು ಹಾಕಿ ಪಿಳ್ಳೆ ಕೆ.ಜಿ. ಜೋಳ, ಗೋದಿ ಇನ್ನಿತರ ಪದಾರ್ಥಗಳನ್ನು ತೆಗೆದುಕೊಳ್ಳುವಂಥ ಪರಿಪಾಠ ಇದೆ. ೫-೬ ಜನ ದಳ್ಳಾಳಿಗಳು ಈ ರೀತಿ ಮಾಡಿದರೆ ರೈತರ ಹಜಾರಾಂತಿ ಆಗುತ್ತದೆ. ಇದರಿಂದ ೧೫-೨೦ ಕೆ. ಜಿ. ಯಷ್ಟು ದವಸವನ್ನು ರೈತರು ಕಳೆದುಕೊಳ್ಳುತ್ತಾರೆ. ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಗದಗ್‌ನಲ್ಲಿ ಮಾನ್ಯ ಪಾಟೀಲರು ಇದನ್ನು ನಿಲ್ಲಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ರೈತನ ಚೀಲಕ್ಕೆ ಚಾಕು ಚೂರಿ ಹಾಕುವಂತಹ ಮಾರುಕಟ್ಟೆಯ ಚಾಕು ಚೂರಿ ಸಂಸ್ಕೃತಿಯನ್ನೆ ನೀವು ತಡೆಗಟ್ಟಿದರೆ ರೈತರನ್ನು ನೀವು ರಕ್ಷಣೆ ಮಾಡುತ್ತೀರಿ ಎಂದು ಹೇಳಬಹುದು. ಕಾನೂನುಗಳು ಬರುತ್ತವೆ, ತಿದ್ದು ಪಡಿಗಳು ಬರುತ್ತವೆ ಆದರಿಂದ ಏನೂ ಪ್ರಯೋಜನ ಇಲ್ಲ, ನೀವು ತಂದಿರುವಂಥ ಕಾನೂನನ್ನು ನಾನು ಆಡಳಿತ ಪಕ್ಷದ ಸದಸ್ಯನಾಗಿರುವುದರಿಂದ ಸ್ವಾಗತ ಮಾಡಲೇಬೇಕು ಆದ್ದರಿಂದ ಸ್ವಾಗತ ಮಾಡುತ್ತೇನೆ. ಪ್ರತಿಪಕ್ಷದವರು ಸ್ವಾಗತ ಮಾಡಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನೀವು ವಿರೋಧ ಮಾಡಿದರೂ ಅಡ್ಡಿ ಇಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನೀವು ತಂದಿರುವಂಥ ತಿದ್ದುಪಡಿಯಿಂದ ರೈತನ ಯೋಗ ಕ್ಷೇಮ ಆಗಬೇಕು ರೈತನ ಹಿತರಕ್ಷಣೆ ಆಗಬೇಕು ಪ್ರತಿಯೊಂದು ಎ. ಪಿ. ಎಂ.ಸಿ. ಯಲ್ಲಿ ರೊಕ್ಕ ಇಲ್ಲ ಎಂದು ಅಲ್ಲ ಮೊನ್ನೆ ಇಲ್ಲಿ ಹೇಳಿದಂತೆ ಜಮಖಂಡಿ ಎ. ಪಿ. ಎಂ. ಸಿ. ಯಲ್ಲಿ ೫೦ ಲಕ್ಷ ರೂಪಾಯಿಗಳು ದುಡ್ಡು ಇದ್ದರೂ ಜಮಖಂಡಿಯಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ೧೦ ಲಕ್ಷ ರೂಪಾಯಿ ಕೊಟ್ಟು

*** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಓವರ್‌ಹೆಡ್ ಟ್ಯಾಂಕ್ ಕಟ್ಟುತ್ತೇವೆಂದು ಹೇಳಲಾಗಿದೆ ಎ. ಪಿ. ಎಂ. ಸಿ. ಯಲ್ಲಿರುವಂಥ ಹಣ ಸೆ ಫ್ ಡೆಪಾಸಿಟ್ ಆಗಿ ಇರುವಂಥ ವ್ಯವಸ್ಥೆ ಇರಬೇಕು, ಹಾಗೂ ಇವರಿಂದ ರೈತರಿಗೆ ಅನುಕೂಲವಾಗುವಂತೆ ಇರಬೇಕು, ಇವೊತ್ತು ಎ.ಪಿ.ಎಂ.ಸಿ. ಗದಗ್‌ನಲ್ಲಿ ಎಷ್ಟು ದುಡ್ಡಿದೆ, ಹಿರೆಕೆರೂರ್‌ನಲ್ಲಿ ಎಷ್ಟು ದುಡ್ಡಿದೆ ನಮ್ಮ ಊರಿನಲ್ಲಿ ಎಷ್ಟು ದುಡ್ಡಿದೆ ಇದೆಲ್ಲಾ ರೈತರದೇ ದುಡ್ಡು. ತಾವು ಈ ಹಣವನ್ನು ರೈತರಿಗೆ ವಿನಿಯೋಗವಾಗುವಂಥ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಈ ವಿಧೇಯಕವನ್ನು ತಂದಿರುವುದಕ್ಕೂ ಸಾರ್ಥಕವಾಗುತ್ತದೆ. ತಾವು ರೈತರ ಪರವಾಗಿ ಒಳ್ಳೆಯದನ್ನು ಮಾಡುತ್ತೀರೆಂದು ನಿರೀಕ್ಷಣೆ ಮಾಡಿ ತಾವು ತಂದಿರುವಂಥ ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾತಿ, ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವಾಗ ''ದಡ್ಡ ಮುಂಡೇ ಮಗ'' ಎನ್ನುವ ಪದವನ್ನು ಪ್ರಯೋಗ ಮಾಡಿದ್ದಾರೆ ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೆ, ಅದು ಅನ್‌ಪಾರ್ಲಿಮೆಂಟರಿ ಪದ ಆಗುತ್ತದೆಯೇ ?

ಅಧ್ಯಕ್ಷರು.—ಅದು ಒಳ್ಳೆಯ ಶಬ್ದ ಅಲ್ಲ ಎಂದು ತೆಗೆದು ಹಾಕಿದ್ದೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಸುಮಾರು ೮-೧೦ ಜನ ಸದಸ್ಯರು ಈ ಒಂದು ತಿದ್ದುಪಡಿ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ. ಅದರಲ್ಲಿ ವಿರೋಧಪಕ್ಷದ ಸದಸ್ಯರು ಹಾಗೆಯೇ ನಮ್ಮ ಪಕ್ಷದ ಸದಸ್ಯರು ಮಾತನಾಡಿದ್ದಾರೆ. ಅದರಲ್ಲಿ ನಮ್ಮ ರೆಡ್ಡಿಯವರು ತುಂಬಾ ಒಳ್ಳೆಯ ಸಲಹೆ ಗಳನ್ನು ಕೊಟ್ಟಿದ್ದಾರೆ. ಆದ್ದರಿಂದ, ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ. ಮೊದಲನೆಯ ದಾಗಿ ಹಿರಿಯ ಅನುಭವಿಗಳಾದ ಪಾಟೀಲರು ಮಾತನಾಡಿದ್ದನ್ನು ನಾವು ಕೇಳಿದ್ದೇವೆ, ಅವರು ದೊಡ್ಡ ಸಹಕಾರಿ ಬಂಧುಗಳು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ನಾವು ತಂದಿರತಕ್ಕ ತಿದ್ದುಪಡಿ ಯನ್ನು ಸ್ವಾಗತ ಮಾಡುತ್ತಾ ಕೆಲವು ವಿಚಾರಗಳನ್ನು ಕೆಲವು ಬುದ್ಧಿವಾದಗಳನ್ನು ಹೇಳಿದರೆಂದೇ ನಾನು ಅಭಿಪ್ರಾಯಿಸಿ ಪಡೆಯುತ್ತೇನೆ. ತುಮಕೂರಿನಲ್ಲಿ ಕಡಲೆಕಾಯಿ ವ್ಯಾಪಾರಕ್ಕೆ ಸಂಬಂಧದಲ್ಲಿ ದೊಡ್ಡ ಅವ್ಯವಹಾರ ನಡೆಯುತ್ತಿದೆ. ಹಾಗೆಯೇ ಗದಗ್ ಮಾರುಕಟ್ಟೆಯನ್ನು ಸ್ಥಳಾಂತರ ಮಾಡತಕ್ಕ ಸುಬರ್ಧ ದಲ್ಲಿ ಬಹಳ ತೊಂದರೆಯಾಗುತ್ತಿದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಇವೊತ್ತು ಏನೇನು ಅವ್ಯವಹಾರ ನಡೆಯುತ್ತಿದೆ ಅವೆಲ್ಲಾಕ್ಕೂ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳಿಕ್ಕೆ ಇಷ್ಟಪಡುತ್ತೆನೆ. ಈವರೆಗೆ ಯಾರೂ ಅವ್ಯವಹಾರ ಮಾಡಿದರು ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕದ್ದರ ಬಗ್ಗೆ ತಮಗೆ ಒಂದು ಉದಾಹರಣೆ ಯನ್ನು ಹೇಳಬೆ ಕೆಂದರೆ ಭದ್ರಾವತಿ ಎ. ಪಿ. ಎಂ.ಸಿ. ಅಧ್ಯಕ್ಷರು ಅವ್ಯವಹಾರ ಮಾಡಿದ್ದಿದು ಗೊತ್ತಾದ ಮೇಲೆ ಅವರನ್ನು ಕಮಿಟಿಯಿಂದ ತೆಗೆದಿದ್ದೇವೆ

೧-೦೦ ಪಿ. ಎಂ.

ಇನ್ನು ತುಮಕೂರಿನಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಇರಬಹುದು, ಇತ್ತೀಚೆಗೆ ಹೊಸದಾಗಿ ಅಲ್ಲಿ ಒಂದು ಮಾರ್ಕೆಟ್ ಯಾರ್ಡ್‌ನ್ನ ಕಟ್ಟಿ ಅಲ್ಲಿಗೆ ಸ್ಥಳಾಂತರ ಮಾಡಿದ್ದೇವೆ. ಅಲ್ಲಿ ನಡೆಯದಂತೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೆನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ತುಂಬಾ ಚೆನ್ನಾಗಿ ಮಾತನಾಡಿದರು. ಆದ್ದ ರಿಂದ ಅವರಿಗೆ ಧನ್ಯವಾದಗಳನ್ನ ಪಿ ಸುತ್ತೇನೆ. ಏಕೆಂದರೆ, ಈ ತಿದ್ದುಪಡಿಯ ಬಗ್ಗೆ ಅವರು ವಿರೋಧ ಮಾಡಬಹುದೆಂದು ನಾನು ತಿಳಿದಿದ್ದೆ. ಅವರು ಏನು ಹೇಳಿದರೆಂದರೆ ಏಜೆಂಟ್ಸ್‌ಗೆ ಏನು ಶಿಕ್ಷೆಯನ್ನು ಮಾಡುತ್ತೀರಿ ಅದೇ ರೀತಿಯ ಶಿಕ್ಷೆಯನ್ನು ರೈತನಿಗೂ ಮಾಡುವಂಥ ಒಂದು ಕಾನೂನನ್ನು ತೆಗೆದು ಕೊಂಡ್ಲು ಬನ್ನಿ ಇಲ್ಲದಿದ್ದರೆ ಇದು ಒಂದೆ ದಿಕ್ಕಿನಲ್ಲಿ ಹೋದಂತಾಗುತ್ತದೆ ಎಂದು ಹೇಳಿದ್ದಾರೆ. ಸ್ವಾಮಿ ನಾನು ಈಗಾಗಲೇ ಹೇಳಿದಂತೆ ರೈತರಿಗೆ ಬಹಳಷ್ಟು ಶಿಕ್ಷೆ ಆಗುತ್ತಿದೆ. ಪುನಃ ಸರ್ಕಾರದಿಂದ ಕಾನೂನನ್ನು ತಂದು ಅವರಿಗೆ ಶಿಕ್ಷೆ ಮಾಡತಕ್ಕದ್ದು ಸರಿಯಲ್ಲ.

ಇನ್ನು ಮಾನ್ಯ ಸದಸ್ಯರಾದ ಮಲ್ಲಾರಿಗೌಡರು ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ನಾನು ಖಾಸಗಿಯಾಗಿಯೂ ಕೂಡ ಅವರ ಜೊತೆ ಮಾತನಾಡಿದ್ದೇನೆ. ಅವರ ವಿಚಾರಧಾರೆಯೇ ಬೇರೆ ರೀತಿ ಇದೆ, ಅವರ ಅಭಿಪ್ರಾಯದಲ್ಲಿ ಇವರಿಗೆ ಎ.ಪಿ.ಎಂ.ಸಿ. ಯಲ್ಲಿ ಒಂದು ಬ್ಯಾಂಕ್ ಆಗಬೇಕು.

ಈ ಕಾನೂನನ್ನು ತರುವುದಕ್ಕಿಂತ ಮೊದಲು ರೈತರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನೂ ಒದಗಿಸಿ ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ರೆಡ್ಡಿಯವರೂ, ಭೂಪತಿಯವರೂ ಮಾತನಾಡಿ ರೈತರ ಮನೆಯಬಾಗಿಲಿಗೆ ಹೋಗಿ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಇಲ್ಲದಂತೆ ಮಾಡುತ್ತಿದ್ದೀರಿ, ರೈತರು ಬೆಳೆದ ಮಾಲನ್ನು ಮಾರ್ಕೆಟ್‌ಗೆ ತೆಗೆದುಕೊಂಡುಹೋಗಿ ಮಾರಾಟ ಮಾಡುವುದಕ್ಕೆ ಕಷ್ಟವಾಗುತ್ತದೆ. ಚಿಕ್ಕಪುಟ್ಟ ರೈತರು ಳ ಚಿ ಲ ಟ್ರ ಚಿ ಲ ೮ ಚಿ ಲ ಈ ರೀತಿ ಬೆಳೆದಂತಹ ಕಾಳನ್ನು ದೂರದ ಹಳ್ಳಿಗಳಿಂದ ಪಟ್ಟಣಗಳಿಗೆ ಸಾಗಿಸಬೇಕಾದ ಸಂದರ್ಭದಲ್ಲಿ ಬಹಳ ಕಷ್ಟವಾಗುತ್ತದೆ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಎ.ಪಿ.ಎಂ.ಸಿ.ಯ ವತಿಯಿಂದ ೧೧೫ ವೇಜರ್ ಮಾರ್ಕೆಟ್ ಯಾರ್ಡ್‌ಗಳನ್ನು, ೨೬೫ ಸಬ್ ಮಾರ್ಕೆಟ್ ಯಾರ್ಡ್‌ಗಳನ್ನು ೮೮ ರೂರಲ್ ಮಾರ್ಕೆಟ್‌ಗಳನ್ನು ಕಟ್ಟಿಸಿದ್ದೇವೆ. ಇಷ್ಟೆಲ್ಲಾ ಮಾಡಿದರೂ ಕೂಡ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಸಂತೆ ನಡೆಯುತ್ತದೆ ಅಂಥ ಕಡೆಗಳಲ್ಲೆಲ್ಲಾ ಸಬ್ ಮಾರ್ಕೆಟ್ ಯಾರ್ಡ್ ಎಂದು ಡಿಕ್ಲೇರ್ ಮಾಡಿದ್ದೇವೆ. ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗಾ, ತುಮಕೂರು ಹೀಗೆ ಎಲ್ಲೇ ಆಗಲಿ ದೊಡ್ಡ ದೊಡ್ಡ ನಗರಗಳಲ್ಲಿ ದೊಡ್ಡ ದೊಡ್ಡ ಮಾರ್ಕೆಟ್‌ಗಳಿವೆ. ಇಲ್ಲಿ ಅನುಕೂಲಗಳು ಕಡಿಮೆ ಇದ್ದರೂ ಇರಲಿ ಹಳ್ಳಿಗಾಡಿನ ರೈತರಿಗೆ, ಚಿಕ್ಕಪುಟ್ಟ ರೈತರು ೧೦ ಚೀಲದೊಳಗೆ ಭತ್ತ, ಸೇಂಗ, ಹತ್ತಿ, ರಾಗಿ ಮುಂತಾದುವನ್ನು ಬೆಳೆದು ಮಾರ್ಕೆಟ್‌ಗೆ ತಂದು ಮಾರಾಟ ಮಾಡತಕ್ಕವರಿಗೆ ಹೋಬಳಿಯ ಪಟ್ಟದಲ್ಲಿ ತಾಲೂಕು ಪಟ್ಟದಲ್ಲಿ ಇನ್ನೂ ಮುಂದಕ್ಕೆ ಹೊಗಿಹೆಳುವುದಾದರೆ, ಮಂಡಲ ಪಂಚಾಯ್ತ್ ವ್ಯಾಪ್ತಿಯಲ್ಲಿಯೂ ಕೂಡ ಒಂದೊಂದು ಮಾರ್ಕೆಟ್ ಯಾರ್ಡನ್ನು ನಿರ್ಮಾಣ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈ ಬಗ್ಗೆ ನಾವು ಎಲ್ಲ ಎ.ಪಿ.ಎಂ.ಸಿ. ಗಳಿಗೂ ಒಂದು ಸರ್ಕ್ಯುಲರ್‌ನ್ನು ಕಳುಹಿಸಿ ಕೊಟ್ಟಿದ್ದೇವೆ. ಕೇಂದ್ರಸ್ಥಾನವಾದ ಮಾರ್ಕೆಟ್ ಯಾರ್ಡ್‌ಗಳಲ್ಲಿ ಹಳ್ಳಿ ಸಂತೆಗಳನ್ನು ಅಭಿವೃದ್ಧಿ ಮಾಡುವ ಸಲುವಾಗಿ ಅಲ್ಲಿ ಎಲ್ಲ ಅನುಕೂಲಗಳನ್ನೂ ಮಾಡಿಕೊಡಿ ಎಂದು ಎ.ಪಿ.ಎಂ.ಸಿ. ಯವರಿಗೆ ನಾವು ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ.

ಇನ್ನು ಹೆಚ್ಚಿಗೆ ಉತ್ತರ ಕರ್ನಾಟಕ ಭಾಗದಲ್ಲಿ ಸಂತೆಗಳು ನಡೆಯುತ್ತವೆ. ಇಂಥ ಸಂತೆಗಳಲ್ಲಿ ಒಂದೊಂದು ಊರಿನಲ್ಲಿ ಸಾವಿರಾರುರೂಪಾಯಿ ದನಗಳು ವ್ಯಾಪಾರವಾಗುತ್ತದೆಂದು ತಿಳಿದುಬಂದಿದೆ. ಅಲ್ಲಿ ಸರಿಯಾದ ರೀತಿಯಲ್ಲಿ ದನಗಳು ನಿಲ್ಲುವುದಕ್ಕೆ ಸ್ಥಳ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ, ಬಹಳವಾಗಿ ತೊಂದರೆಪಡುತ್ತಿದ್ದಾರೆಂದು ಕೇಳಿದ್ದೇನೆ. ಇವರ ಬಗ್ಗೆಯೂ ಕೂಡ ನಾನು ವ್ಯವಸ್ಥೆಯನ್ನು ಮಾಡಿ ಅಲ್ಲಿ ಇವುಗಳಿಗೋಸ್ಕರ ಒಂದು ಮಾರ್ಕೆಟ್ ಮಾಡಬೇಕೆಂದು ಹೇಳಿ ಪ್ರಯತ್ನ ಮಾಡುತ್ತಿದ್ದೇನೆ.

ಇನ್ನು ಸಾಗಾಣಿಕೆಯು ಈಗಾಗಲೇ ಮಾರ್ಕೆಟ್‌ನಲ್ಲಿ, ಹೊರಗಡೆಯಿಂದ ಸಾಗಾಣಿಕೆ ಆಗುತ್ತಿದೆ. ಇಲ್ಲಿ ಪ್ರತಿಯೊಂದು ಎ.ಪಿ.ಎಂ.ಸಿಯವರು ಕೂಡ ಸಾಧ್ಯವಾದಮಟ್ಟಿಗೆ ತಮ್ಮದೇ ಆದ ಲಾರಿ, ಟ್ರಾಕ್ಟರುಗಳನ್ನು ಇಟ್ಟುಕೊಂಡು ಒಂದು ರೇಟನ್ನು ಫಿಕ್ಸ್‌ಮಾಡಿ ಎಲ್ಲೆಲ್ಲಿ ಸಾಮಾನುಗಳು ಬರುತ್ತದೆ ಅಲ್ಲಿಂದ ಮಾರ್ಕೆಟ್‌ಗೆ ಸಾಗಿಸುವುದಕ್ಕೆ ನೋಲಾಸ್, ನೋಪ್ರಾಫಿಟ್, ಬೆಸಿಸ್‌ಮೇಲೆ ಸಾಗಾಣಿಕೆಯ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಇದೇ ರೀತಿ ಪ್ರತಿಯೊಂದು ಎ.ಪಿ.ಎಂ.ಸಿಗೂ ಕೂಡ ತಿಳಿಸಿದ್ದೇವೆ. ಬೆಂಗಳೂರು ಎ.ಪಿ.ಎಂ.ಸಿ. ಯಲ್ಲಿ ಈಗಾಗಲೇ ಇದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಒಂದು ತೊಂದರೆ ಏನೆಂದರೆ ಡೈವರ್ಸನ್ನು ಸ್ವಲ್ಪ ವ್ಯವಸ್ಥೆಮಾಡುವುದಕ್ಕೆ ಕಷ್ಟವಾಗುತ್ತದೆ. ತಕ್ಷಣದಲ್ಲಿಯೇ ಅವರನ್ನೂ ಕೂಡ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ತಮಗೆ ಈ ಸದನದಲ್ಲಿ ಒಂದು ಹೊಸ ವಿಚಾರವನ್ನು ತಿಳಿಸಬೇಕೆಂದಿದ್ದೇನೆ. ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್ ಏನು ಇದೆ ಅದರ ಬಗ್ಗೆ ಬಹುತೇಕ ತಿದ್ದುಪಡಿಗಳು ಒಂದಲ್ಲ ಒಂದುಸಾರಿ ತಿದ್ದುಪಡಿಯಾಗುತ್ತಲೇ ಬಂದಿದೆ. ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿಗಳು ಆಗುತ್ತಲೇ ಬಂದಿರುತ್ತವೆ. ಇದನ್ನು ನೋಡಿ ನಾನು ಈ ಖಾತೆಯನ್ನು ಪಹಿಸಿಕೊಂಡ ಮೇಲೆ ಚಿಂತನೆ ಮಾಡಿ ಒಂದು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ತಂದು ಅದನ್ನು ಕಾರ್ಯಾಚರಣೆಗೆ ತರಬೇಕೆಂದು ಪ್ರಯತ್ನ ಮಾಡಿದ್ದೇನೆ. ರೈತರಿಗೆ ಏನೇನು ಅನುಕೂಲತೆಗಳು ಬೇಕು ಈ ರಾಜ್ಯದಲ್ಲಿ ಅವೆಲ್ಲವನ್ನು ಅಳವಡಿಸಲು ಪ್ರಯತ್ನ ಮಾಡುತ್ತಿದ್ದೇನೆ. ಇದರ ಬಗ್ಗೆ ಈಗಾಗಲೇ ಒಂದು ಸಮಿತಿಯನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ಕೂಡ ತೆಗೆದುಕೊಂಡಿದ್ದೇನೆ. ಅದನ್ನು ಮಾಡುತ್ತೇನೆ. ಕೇವಲ ೨-೩ ತಿಂಗಳಲ್ಲಿ ಇದನ್ನು ಪೂರೈಸಬೇಕೆಂದು ನನ್ನ ಅಭಿಪ್ರಾಯವಿದೆ. ಅದನ್ನು ಕೂಡ ಮಾಡುತ್ತೇನೆಂದು ಈ ಸದನದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರು

ಇಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದಾರೆ. ಸಾಧ್ಯವಾದಮಟ್ಟಿಗೆ ಅವೆಲ್ಲವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ. ಆದ್ದರಿಂದ ಈ ಮಸೂದೆಗೆ ತಾವೂ ಎಲ್ಲರೂ ಒಮ್ಮತದಿಂದ ಒಪ್ಪಿಗೆ ಕೊಡಬೇಕೆಂದು ಮತ್ತೊಮ್ಮೆ ವಿನಂತಿಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ನನ್ನ ನಿರ್ದಿಷ್ಟವಾದ ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ರೈತರ ವಿರುದ್ಧವಾಗಿ ರೈತರಿಗೆ ಶಿಕ್ಷೆಯನ್ನು ಕೊಡತಕ್ಕ ರೀತಿಯಲ್ಲಿ ಹೇಳುತ್ತಿದ್ದಾರೆ. ರೈತರ ಹಿತದೃಷ್ಟಿಯಿಂದ ಕೆಲಸಮಾಡುವಾಗ ರೈತರು ಮತ್ತು ವ್ಯಾಪಾರಸ್ಥರು ಶಾಮಿಲಾಗಿ ಮಾರ್ಕೆಟ್ ಯಾರ್ಡಿಗೆ ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದಾರೆ. ರೈತರೆಂದು ಹೇಳಿಕೊಳ್ಳುತ್ತಿರುವ ಈ ವ್ಯಾಪಾರಸ್ಥರಿಗೆ ರಕ್ಷಣೆ ಕೊಡುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲ. ಇವರು ನಿಜವಾದ ವ್ಯಾಪಾರಸ್ಥರಲ್ಲ. ನಿಜವಾದ ವ್ಯಾಪಾರಸ್ಥ ಬಾಂಬೆಯಲ್ಲಿರುತ್ತಾನೆ. ಅವನ ಒಂದು ಏಜೆಂಟ್ ಏನು ಮಾಡುತ್ತಾನೆಂದರೆ ರೈತರ ಹೆಸರಿನಲ್ಲಿ ಸಾಗಾಣಿಕೆ ಮಾಡಿಸಿಬಿಡುತ್ತಾನೆ. ಈ ರೀತಿ ಸರ್ಕಾರಕ್ಕೆ ವಿರುದ್ಧವಾಗಿ ಇಡೀ ಮಾರ್ಕೆಟ್‌ಗೆ ಪ್ಯಾರಲಲ್ ಆಗಿ ಈ ವ್ಯವಸ್ಥೆ ಹೋಗತಕ್ಕಂಥ, ಆಕ್ಟಿವಿಟೀಸ್ ಇಟ್ಟುಕೊಂಡಿರುತ್ತಾರೆ. ಇವರಿಗೆ ಸರ್ಕಾರದ ಪ್ರಭಾವವು ಇರುತ್ತದೆ. ಸಾಕಷ್ಟು ಹಣವನ್ನು ಇವರು ಹೊಂದಿದ್ದಾರೆ, ಊರುಗಳಲ್ಲಿ ಗೂಂಡಾಗಳನ್ನು ಇಟ್ಟುಕೊಂಡಿರುತ್ತಾರೆ. ಸಣ್ಣಪುಟ್ಟ ರೈತರು ತೆಗೆದುಕೊಂಡು ಬರತಕ್ಕಂಥ ವಸ್ತುಗಳನ್ನು ಅಲ್ಲಿ ತಡೆಹಿಡಿಯುತ್ತಾನೆ. ಅವರನ್ನು ಏನು ಮಾಡುತ್ತೀರಿ? ಅವರನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಅರ್ಧಂಬರ್ಧ ಬರತಕ್ಕಂಥ ವಸ್ತುಗಳೂ ಕೂಡ ಮಾರ್ಕೆಟ್‌ಗೆ ಬರುವುದಿಲ್ಲ ಇದರಿಂದ ಸರ್ಕಾರಕ್ಕೆ ಬರತಕ್ಕಂಥ ಲಕ್ಷಾಂತರ ರೂಪಾಯಿಗಳು, ಹಾಳಾಗಿ ಹೋಗುತ್ತಿದೆ. ಬಾಕಿ ವ್ಯಾಪಾರ ಎಡತನೆಯದು. ಮೊದಲನೆಯದು ಸರ್ಕಾರಕ್ಕೆ ಕೊಡುವ ತೆರಿಗೆಯನ್ನು ಉಳಿಸಿಕೊಂಡರೆ ಅದೇ ಲಾಭ. ಅಹಾರಧಾನ್ಯ ಬೆಳೆದಿರತಕ್ಕ ರೈತನಿಗೆ ರಿಯಾಯಿತಿ ಕೊಡಿ. ನೀವು ಇಷ್ಟು ತೀವ್ರವಾಗಿ ಹೋಗುವುದು ಬೇಡ. ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವವರಿಗೆ ಏತಕ್ಕೆ ಬಾಧ್ಯಸ್ಥಿಕೆ ಉಂಟುಮಾಡಬಾರದು?

ಶ್ರೀ ಕೆ. ಹೆಚ್. ಪಾಟೀಲ್.—ಶ್ರೀನಿವಾಸರವರು ಹೇಳಿದರು, ರೈತನ ಹೆಸರಿನಲ್ಲಿ ರೈತನಿಗೆ ದ್ರೋಹ ಮಾಡುವ ವಿಜಂಟರು ಇದ್ದಾರೆ, ಅವರು ನಿಮ್ಮ ಕಕ್ಷೆಯಲ್ಲಿ ಬರುವುದಿಲ್ಲ. ದಯವಿಟ್ಟು ವಿಚಾರ ಮಾಡಿ ಅಂಥ ಜನರಿಗೆ ಶಿಕ್ಷೆ ವಿಧಿಸಬೇಕು. ರೈತರನ್ನು ಯಾರು ತುಳಿಯಲಿಕ್ಕೆ ಪ್ರಯತ್ನಿಸುತ್ತಾರೆ. ರೈತನ ಹೆಸರಿನಲ್ಲಿ ಯಾರು ಮುಂಬೈಗೆ ಕಳುಹಿಸುತ್ತಾರೆ ಅಂಥವರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಮಸೂದೆಯಲ್ಲಿ ಅವಕಾಶ ಇದೆ, ಆದರೆ ಅಧಿಕಾರಿಗಳಿಗೆ ವಿಚಾರಣೆ ಮಾಡಿ ಎಂದರೆ ೪-೫ ಇಂಥವರು ಪರ್ಸೆಂಟ್ ಸಿಗಬಹುದು. ಉಳಿದದ್ದು ಕದ್ದು ಹೊಡೆಯಲಿಕ್ಕೆ ಸಾಧ್ಯತೆ ಇದೆ,

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಮಾನ್ಯ ಮಂತ್ರಿಗಳು ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟನ್ನು ಸಮಗ್ರವಾಗಿ ಆಲೋಚಿಸಿ ಬದಲಾವಣೆ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದಾರೆ, ಅದು ನಿಜವಾಗಿ ಸ್ವಾಗತಾರ್ಹವಾದುದು, ಆ ಸಂದರ್ಭದಲ್ಲಿ, ಈಗ ೫೦ ಪರ್ಸೆಂಟ್ ಪ್ರೊಡ್ಯೂಸರ್ಸ್ ಕಮಿಟಿಯಲ್ಲಿ ರುತ್ತಾರೆ ಅದನ್ನು ೭೦ ಪರ್ಸೆಂಟ್‌ಗೆ ಏರಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಶ್ರೀನಿವಾಸ್ ಹೇಳಿದರು ಮೋಸ ಆಗುತ್ತಿದೆ ಎಂದು. ನಾವು ಹಳ್ಳಿಯಲ್ಲಿ ನೋಡಿದ್ದೇವೆ. ಅಲ್ಲಿ ವ್ಯಾಪಾರ ಮಾಡತಕ್ಕವನು ವಿಲೇಜು ಅಕೌಂಟೆಂಟ್ ಹತ್ತಿರ ರೈತನ ಹೆಸರಿನಲ್ಲಿ ಚೀಟಿ ತೆಗೆದುಕೊಂಡು ಅವನ ಮಾಲನ್ನು ಮೈಸೂರಿಗೆ ಕಳುಹಿಸುತ್ತಾನೆ. ಹೀಗೆ ಎಲ್ಲಾ ರೈತರಿಂದ ಚೀಟಿ ಕಲೆಕ್ಟ್ ಮಾಡಿ ಚೀಟಿ ಜೊತೆಯಲ್ಲಿ ಲಾರಿ ಲೋಡ್ ತಂದು ಹಾಕುತ್ತಾನೆ ಅವನು ಸಾಮಾನ್ಯ ವ್ಯಾಪಾರಸ್ಥನಲ್ಲ. ಅವನು ಎಲ್ಲೋ ಏಜೆಂಟ್ ಹತ್ತಿರ ದುಡ್ಡು ತೆಗೆದುಕೊಂಡು ವ್ಯಾಪಾರ ಮಾಡಿ ಅಲ್ಪಸ್ವಲ್ಪ ಲಾಭ ಹೊಡೆಯತಕ್ಕ ವ್ಯಾಪಾರಸ್ಥ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಜವಾಗಿ ವ್ಯಾಪಾರ ಮಾಡುವುದಕ್ಕೆ ಯೋಗ್ಯತೆ ಇರುವಂಥ ವ್ಯಾಪಾರಸ್ಥ, ಈ ವ್ಯಾಪಾರದಿಂದ ಹೆಚ್ಚು ಲಾಭ ದೊರೆಯುತ್ತದೆಂದು ಮಾಡುತ್ತಿದ್ದಾನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಅದಕ್ಕೋಸ್ಕರವಾಗಿ ಈಗಾಗಲೇ ತಾವು ಹೇಳಿದುದನ್ನು ಗಮನದಲ್ಲಿಟ್ಟುಕೊಂಡು ಕಮಿಟಿ ಎನಿದೆ ಅದರ ಮುಂದಿಟ್ಟು ಸೂಕ್ತವಾಗಿ ಇದನ್ನು ತಿದ್ದುಪಡಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ, ಮಾನ್ಯ ಜಾಲಪ್ಪನವರು ಇದ್ದ ಸಂದರ್ಭದಲ್ಲಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೈತರಿಂದ ಸೆಸ್‌ವಸೂಲ್ಮಾ ಡಬಾರದು, ದಳ್ಳಾಳಿಗಳಿಂದ ಮಾಡಬೇಕು, ಕೊಳ್ಳುವವರಿಂದ ಮಾಡ ಬೇಕೆಂದು ಒಂದು ಪರ್ಸೆಂಟ್ ಕಮೀಷನ್ ವಸೂಲ್ಮಾಡಬೇಕೆಂದು ಮಾಡಿದ್ದರು. ಈ ಬಗ್ಗೆ ಅವರು ಹೇಳತಕ್ಕದ್ದು ನಿಜ. ಈಗ ಎರಡೂ ಕಡೆಯಿಂದ ವಸೂಲ್ಮಾಡುತ್ತಿದ್ದಾರೆ. ಮಾನ್ಯ ಭೂಪತಿಯವರು ಹೇಳಿದ ಹಾಗೆ ಹಿಂದೆ ಸಾಲಾ ತೆಗೆದುಕೊಂಡ ದಾಕ್ಷಿಣ್ಯಕ್ಕೆ ರೈತರಿಂದ ೧೦ ಪರ್ಸೆಂಟ್ ವಸೂಲ್ಮಾಡ ಲಾಗಿದೆ. ಕಾನೂನು ಪ್ರಕಾರ ಪರ್ಚೆಸರ್ ಯಾರಿರುತ್ತಾರೆ ಅವರಿಂದ ವಸೂಲ್ಮಾಡತಕ್ಕದ್ದು ನಡೆಯುತ್ತಿದೆ. ನಾನು ಒಂದು ಸಾರಿ ಬೆಳಿಗ್ಗೆ ೬ ಗಂಟೆಗೆ ಬೆಂಗಳೂರಿನ ಎಪಿಎಂಸಿ.ಗೆ ಹೋಗಿದ್ದೆ. ಸಂದರ್ಭದಲ್ಲಿ ಒಬ್ಬ ನರಸಿಂಹಯ್ಯ ಎಂಬ ದಳ್ಳಾಳಿ ಹತ್ತಿರ ಹೋಗಿ, ನನ್ನ ಹತ್ತಿರ ೨ ಸಾವಿರ ನಿಂಬೆ ಹಣ್ಣು ಇದೆ, ಹೇಗೆ ತಗೆದುಕೊಳ್ಳುತ್ತೀಯ ಎಂದು ಕೇಳಿದಾಗ ಬೆಳಿಗ್ಗೆ ತಾನೇ ಇರುವ ರೇಟ್ ಹಾಕುತ್ತೇನೆ, ಎಂದು ನಾನು ದಳ್ಳಾಳಿ ಏನಾದರೂಕೊಡಬೇಕೇ ಎಂದಾಗ ಕಾನೂನು ಎನೋ ಮಾಡಿದ್ದಾರೆ ಕಾನೂನು ರೀತ್ಯ ರಶೀತಿ ಕೊಡುವ ಹಾಗೆ ಇಲ್ಲ. ೧೦ ಪರ್ಸೆಂಟ್ ಮಾತ್ರ ಕಮಿಷನ್ ಕೊಡಲೇಬೇಕೆಂದು ಹೇಳಿದ. ಇದು ವಾಸ್ತವ ಸಂಗತಿ. ಇದನ್ನು ತಡೆಹಿಡಿಯಬೇಕಾದರೆ ಏನು ಮಾಡಬೇಕೆಂಬುದನ್ನು ಆಲೋಚಿಸಬೇಕಾಗಿದೆ. ಇದಕ್ಕೆ ರೈತರು ಶಾಮೀಲಾಗಿರುತ್ತಾರೆ. ಏಕೆಂದರೆ ಅವರಿಗೆ ತಿಳುವಳಿಕೆ ಇಲ್ಲದೆ ಅವನು ಹೇಳಿದ್ದನ್ನು ಕೊಟ್ಟು ಬರುತ್ತಿದ್ದಾರೆ. ಈ ದಿಸೆಯಲ್ಲಿ ರೈತರು ಸಹಕಾರ ನೀಡದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಈ ಕಮಿಷನನ್ನು ರೈತರು ಕೊಡುವುದಿಲ್ಲ ಎಂದು ಹಠ ಹಿಡಿದರೆ ಅವರಿಗೂ ಕಷ್ಟವಾಗುತ್ತದೆ. ಸ್ವಲ್ಪ ದಿವಸ ರೈತರಿಗೆ ಸರಿಯಾದ ತಿಳುವಳಿಕೆ ಬರುವವರಿಗೆ ಈ ಕಾನೂನು ಚಲಾವಣೆ ಮಾಡುವುದಕ್ಕೂ ಕಷ್ಟವಾಗುತ್ತದೆ. ರೈತರಿಗೆ ಸರಿಯಾಗಿ ತಿಳುವಳಿಕೆ ಕೊಡಬೇಕು. ಅವರೂ ಕೂಡ ತಿಳುವಳಿಕೆ ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಈ ಕಾನೂನು ತಂದಿದ್ದು ತಪ್ಪು ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ರೈತರಿಗೆ ಸರಿಯಾದ ತಿಳುವಳಿಕೆ ಕೊಡಬೆ ಕಾದುದು ನಮ್ಮ ಆದ್ಯ ಕರ್ತವ್ಯ. ಆದನ್ನು ಮಾಡುತ್ತೇವೆಂದು ಹೇಳಿ ತಾವೆಲ್ಲಾ ಈ ಕಾನೂನನ್ನು ಪಾಸ್ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸಿ ಕೊಳ್ಳುತ್ತೇನೆ.

## ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು.— ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ರದ್ದಿನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನಗಳ ವಾರಾಟ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕು"

ಪ್ರಸ್ತಾವಕ್ಕೆ ಸರ್ವಾನುಮತದ ಅನುಮೋದನೆ ದೊರಕಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨.—

ಅಧ್ಯಕ್ಷರು.—ಇದಕ್ಕೆ ಮಾನ್ಯ ಸದಸ್ಯರಾದ ಶ್ರೀವೆಂಕಟರಾಮಯ್ಯನವರು ತಿದ್ದುಪಡಿ ಕೊಟ್ಟಿದ್ದಾರೆ. ಆದರೆ ಅವರು ಹಾಜರಿಲ್ಲ. ಈಗ ಸರ್ಕಾರದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"೨ನೇ ಖಂಡವು ವಿಧೇಯಕದ ಅಂಗವಾಗಬೇಕು.

ಪ್ರಸ್ತಾವಕ್ಕೆ ಸರ್ವಾನುಮತದಿಂದ ಒಪ್ಪಿಗೆ ದೊರಕಿತು. ೨ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ ೩ರಿಂದ ೧೨ರವರೆಗೆ

ಅಧ್ಯಕ್ಷರು.—ಖಂಡ ೩ರಿಂದ ೧೨ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರ ಬೇಕೆಂಬುದು ಸಭೆಯ ಮುಂದಿರುವ ಪ್ರಸ್ತಾವ.

ಪ್ರಸ್ತಾವಕ್ಕೆ ಸರ್ವಾನುಮತದ ಒಪ್ಪಿಗೆ ದೊರಕಿತು. ಖಂಡ ೩ ರಿಂದ ೧೨ ರವರೆಗೆ ವಿಧೇಯಕದ ಅಂಗವಾಯಿತು.

ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ.—

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ ಮೊದನೇ ಖಂಡ ಹೆಸರು ಮತ್ತು ಅವತರಣಿಕಗಳು ವಿಧೇಯಕದ ಅಂಗವಾಗಬೇಕು.''

ಪ್ರಸ್ತಾವಕ್ಕೆ ಸರ್ವಾನುಮತದಿಂದ ಒಪ್ಪಿಗೆ ದೊರಕಿತು, ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಯಿತು.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು.—ಈಗ ಮಾನ್ಯ ''ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಕೆ. ಬಿ. ಮಲ್ಲಪ್ಪ (ರೆಗ್ಯುಲೇಟೆಡ್ ಮಾರುಕಟ್ಟೆಗಳ ರಾಜ್ಯ ಮಂತ್ರಿಗಳು).—

ಮಾನ್ಯ ಅಧ್ಯಕ್ಷರೆ, ''೧೯೬೭ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನಗಳ ಮಾರಾಟ, ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ:

''೧೯೬೭ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನಗಳ ಮಾರಾಟ, ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿ ಮಾಡಿದಂತೆ ಅಂಗೀಕರಿಸಬೇಕು''.

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಮತ್ತು ವಿಧೇಯಕಕ್ಕೆ ಸರ್ವಾನುಮತದಿಂದ ಅನುಮೋದನೆ ದೊರಕಿತು.

ಅಧ್ಯಕ್ಷರು.—ಇನ್ನೊಂದು ಬಿಲ್ ಇದೆ. ಬಹಳ ಸಿಂಪಲ್ ಇದೆ ಅದನ್ನು ಮುಗಿಸೋಣವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ಸೋಮವಾರ ತೆಗೆದುಕೊಳ್ಳಿ.

ಶ್ರೀ ಯು. ಭೂಪತಿ.—ಇನ್ನೂ ರೆಸಲ್ಯೂಷನ್ ಇದೆ. ಬಹಳ ವಿಚಾರ ಚರ್ಚೆ ಮಾಡಬೇಕಾಗಿದೆ. ಸೋಮವಾರ ತೆಗೆದುಕೊಳ್ಳಿ.

ಶ್ರೀಮತಿ ಮುಕ್ತರುನ್ನೀಸಾ.—ಸೋಮವಾರ ತೆಗೆದುಕೊಳ್ಳಿಸಾರ್.

ಅಧ್ಯಕ್ಷರು.—ಮಾನ್ಯ ಲಕ್ಷ್ಮಿ ಸಾಗರ್ ಅವರೆ ಅವರು ಎರಡು ಬಿಲ್ಲನ್ನು ಸರ್ವಾನುಮತದಿಂದ ಮಾಡಿಕೊಟ್ಟಿದ್ದಾರೆ. ಇದಕ್ಕೂ ಸಹಕಾರ ಕೊಡುತ್ತಾರೆ. ಸೋಮವಾರ ತೆಗೆದುಕೊಳ್ಳೋಣವೇ ?

ಪ್ರೊ॥ ಎ. ಲಕ್ಷ್ಮಿಸಾಗರ್.—ಕೂಪಾಯಿಲ್ ಟೈಮಿನಲ್ಲಿ ಮಾನ್ಯ ಖಾರ್ಗೆಯವರು ಇರಬೇಕು.

ಅಧ್ಯಕ್ಷರು.—ಸೋಮವಾರ ಪಾಸ್ ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾಡುತ್ತೇವೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಈಗಿರುವ ಮಸೂದೆಗಳನ್ನೆಲ್ಲಾ ಸೋಮವಾರದ ಪಟ್ಟಿಯಲ್ಲಿ ಹಾಕತಕ್ಕ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕಲ್ಪಿಸಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ತೆಗೆದುಕೊಳ್ಳಿ. ಇದರ ಬಗ್ಗೆ ಬಹಳ ದೀರ್ಘವಾಗಿ ನಾವು ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಯು. ಭೂಪತಿ.—ಇದು ಬಹಳ ಮುಖ್ಯವಾದುದು. ಇವತ್ತೇ ಇದನ್ನು ಮುಗಿಸುವುದಕ್ಕಾಗುವುದಿಲ್ಲ. ಸೋಮವಾರವೂ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೆಕ್ಷನ್ ೨ರಲ್ಲಿ ಕೆಲವು ಸಮಸ್ಯೆಗಳಿವೆ. ೧೦(ಬಿ) ನಲ್ಲಿ ಅವರಿಗೆ ಕೆಲವು ಅಧಿಕಾರವನ್ನು ಕೊಟ್ಟಿದ್ದೀರಿ. ಇವೆಲ್ಲವನ್ನೂ ಹೇಳಬೇಕಾದರೆ ಸವಿಸ್ತಾರವಾಗಿ ಚರ್ಚೆ ಮಾಡಬೇಕಾಗುತ್ತದೆ.